UNIVERSITY LIBRARY
Agri Newspaper Clippings
Monday 09-02-2026
For more information visit University Library Website
Web - uasbagrilibindia.org
E-mail- librarian@uasbangalore.edu.in



Mixed-cropping saving lives in D'gere

Basavaraj Maralihalli | TNN

Davanagere district has been witnessing a steady decline in the number of farmer suicides over the past three years, which, the district agriculture office is attributing to the widespread adoption of mixed-cropping. Alongside traditional crops like rice and maize, farmers are increasingly growing horticultural crops ranging from areca and coconut palms to fruits.

"For the past five years, farmers have been shifting away from traditional mono-crop farming practice to mixed-cropping. For example, they are growing more areca palms now. Banana yield too has gone up," says Raghavendra, joint director at the horticulture office. In 2020-21, areca was grown in 96,710 hectares, and by 2024-25, the area has increased to 1,04,575 hectares.

According to the district agriculture office, farmers used to take out huge loans to grow a single crop, and when yields failed, many resorted to suicide as they had no income to repay their debt. By shifting from single-crop farming to a multi-crop model driven by horticultural crops, including mango, papaya and dragon fruit, they are now able to hedge against possible losses. Davanagere is also known for commercial floriculture, particularly jasmine, scented yellow chrysanthemum and marigold.

Data shows 56 farmers ended lives in the district in 2023-24, 47 farmers in 2024-25. This year, the number did not reach double digits, which is being seen as a positive outcome of the change in cropping pattern. There are 3,25,000 farmers in the district, including 1,20,000 marginal, 65,000 small, and 73,000 large landholders. Among those who committed suicide, the number of small and marginal landholders was higher.

Working with farmers

Taking advantage of existing plantations, farmers are intercropping black pepper with areca nut. This practice, supported by the Tharalabalu Krishi Vigyan Kendra (TKVK), has helped some farmers increase their annual revenue by up to Rs 2 lakh. "We have been creating awareness among the farmers for sustainable crops, especially intercropping. We are also giving a warning to farmers regarding the areca crop because it cannot be grown everywhere. Cocoa is a better intercrop than the areca nut, and we have been receiving good response from farmers," says TN Devaraj, director of TKVK.

Davanagere farmers have taken huge strides by growing Malnad crops — now pepper is being grown in 620 hectares, coffee in 130 hectares and other tree species in 200 hectares as intercrop in areca nut plantations for the past five years, according to the horticulture department. Earlier, these crops were limited to Coorg, Chikkamagalur, Hassan and Dakshin Kannada. "This change has brought farmers financial stability," says an agriculture department official.

Parashuram Bati, a marginal farmer in Honnalli taluk, notes that earlier most of the farmers were growing only maize or paddy, which sent farmers into a debt cycle. "Now, we also grow horticulture crops, especially areca nut. The produce has a local market and we are getting good prices," he says.

Farmers have been getting a market for their produce easily — Chennagiri, a prominent areca nut market in Karnataka, is located in Davanagere itself. Banana too has a big market in Davanagere, so farmers don't need to pay for transportation for their produce.

Chrysanthemums under LED lights

The chrysanthemum cultivation spans several border villages in the Davanagere district, towards Chitradurga. Farmers have adopted LED lighting technology for their chrysanthemum cultivation, installing approximately 300 LED bulbs per acre to maintain steady production throughout the year. The scented yellow chrysanthemum flowers are grown throughout the year, providing farmers with a steady income.

"Farmers are required to set up LED bulbs to produce light and heat for the plants to avoid diseases and grow them in a short duration to get a better yield. The LED light works like medicine and generates heat for the plants," explains an officer from the department of horticulture.

Times of India Pg.02

ರೇಷ್ಮೆ ಕೃಷಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ದೇವನಹಳ್ಳಿ: ರೇಷ್ಮೆಇಲಾಖೆ ವತಿಯಿಂದ 2023-24 ಹಾಗೂ 2024-25ನೇ ಸಾಲಿನ ರೇಷ್ಮೆ ಕೃಷಿ ಪ್ರಶಸ್ತಿಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರಗತಿ ಪರ ರೇಷ್ಮೆ ಬೆಳೆಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ರೇಷ್ಮೆ ಇಲಾಖೆ ಉಪನಿರ್ದೇಶಕ ಲಕ್ಷ್ಮಣ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ರೇಷ್ಮೆಬೆಳೆಗಾರರು ಕನಿಷ್ಠ 1 ಎಕರೆ ಹಿಪ್ಪನೇರಳೆ ವಿಸ್ತೀರ್ಣ ಹೊಂದಿರಬೇಕು. ಪ್ರತ್ಯೇಕ ಹುಳುಸಾಕಾಣಿಕಾ ಮನೆ ಹೊಂದಿರಬೇಕು. 100 ರೇಷ್ಮೆ ಮೊಟ್ಟೆಗೆ ಸರಾಸರಿ ರೇಷ್ಮೆ ಗೂಡಿನ ಇಳುವರಿ 65 ಕೆ.ಜಿ.ಗಿಂತ ಕಡಿಮೆ ಇರಬಾರದು ಅರ್ಹತೆ ಹೊಂದಿರುವ ರೇಷ್ಮೆ ಬೆಳೆಗಾರರು ಆಯಾ ತಾಲೂಕಿನ ಸ್ಥಳೀಯ ರೇಷ್ಮೆ ಕೃಷಿ ವಿಸ್ತರಣಾಧಿಕಾರಿಗಳು/ ರೇಷ್ಮೆ ಸಹಾಯಕ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಿ ಎಂದು ಮಾಹಿತಿ ನೀಡಿದರು.

Udayavani Pg.04

ವಿದ್ಯಾರ್ಥಿಗಳು ಕೃಷಿ ಚಟುವಟಿಕೆಗಳಿಗೆ ಸಲಹೆ ನೀಡುವಂತಾಗಬೇಕು: ಸಿಪಿವೈ

ಸಂ.ಕ.ಸಮಾಚಾರ ಚನ್ನಪಟ್ಟಣ



ವಿದ್ಯಾರ್ಥಿಗಳು ಕೃಷಿ ಸಂಬಂಧಿತ ವಿಷಯ ಗಳಲ್ಲಿ ಉನ್ನತ ಶಿಕ್ಷಣ ಪಡೆದು, ರೈತರ ಕೃಷಿ ಚಟುವಟಿಕೆಗಳಿಗೆ ಸಲಹೆ ಹಾಗೂ ಸಹಕಾರ ನೀಡುವಂತಾಗಬೇಕು ಎಂದು ಶಾಸಕ ಸಿ.ಪಿ. ಯೋಗೇಶ್ವರ್ ಅವರು ಸಲಹೆ ನೀಡಿದರು.

ನಗರದ ಶತಮಾನೋತ್ಸವ ಭವನದಲ್ಲಿ ನಡೆದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ 2025-26ನೇ ಸಾಲಿನ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ ಸಮಾರಂಭ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಇಂದು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಹಲವು ಕೋರ್ಸ್‌ಗಳು ಲಭ್ಯವಿದ್ದು, ಅವುಗಳಲ್ಲಿ ಅಧ್ಯಯನ ಮಾಡುವ ಮೂಲಕ ವಿದ್ಯಾರ್ಥಿಗಳು ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ಶಿಕ್ಷಣದ ಜೊತೆಗೆ ಕೃಷಿ ಅಭಿವೃದ್ಧಿಗೆ ತಮ್ಮ ಜ್ಞಾನವನ್ನು ಬಳಸಿಕೊಳ್ಳಬೇಕು ಎಂದು ಹೇಳಿದರು. ಕನ್ನಡ ಉಪನ್ಯಾಸಕ, ಪತ್ರಕರ್ತ ಎಚ್. ಎಂ.ರಮೇಶ್ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಸ್ಪಷ್ಟ ಗುರಿ ಇಟ್ಟುಕೊಳ್ಳಬೇಕು. ಗುರಿಗಳು ಉತ್ತಮವಾಗಿದ್ದರೆ ಸಾಧನೆಗಳು ಸಹ ಅದೇ ಮಟ್ಟದಲ್ಲಿ ಉನ್ನತವಾಗಿರುತ್ತವೆ. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಜೀವನದಲ್ಲಿ ಇದು ಮಹತ್ವದ ಹಂತವಾಗಿದ್ದು, ಇದನ್ನು ಅರಿತು ಮುಂದಿನ ಬದುಕಿಗೆ ಸಜ್ಜಾಗಬೇಕು ಎಂದು ಕಿವಿಮಾತು ಹೇಳಿದರು.ಕಾರ್ಯಕ್ರಮದಲ್ಲಿ ಡಿ. ಪುಟ್ಟಸ್ವಾಮಿಗೌಡ, ಎ. ಕಾಂತರಾಜು, ಎಚ್.ಎಲ್. ಶಂಕರೇಗೌಡ, ಎಚ್. ರಾಮಯ್ಯ, ಪುಟ್ಟರಾಜು, ಪಿ. ಶಿವಕುಮಾರ್, ಇಂದ್ರಮ್ಮ, ಸುರೇಶ್ ಭಾಗವಹಿಸಿದ್ದರು.

Samuktyakarnataka Pg.04

ಲವಲವಿಕ ಫಿಟ್ನೆಸ್ ಫಂಡಾ

ಚಯಾಪಚಯ ಕಾರ್ಯ ಹೆಚ್ಚಿಸಿ



ಎಷ್ಟೇ ಪ್ರಯತ್ನಪಟ್ಟರೂ ವೇಯಿಂಗ್ ಸ್ಕೇಲ್‌ನಲ್ಲಿ ತೋರಿಸುವ ಸಂಖ್ಯೆ ಬದಲಾಗುತ್ತಲೇ ಇಲ್ಲ ಎಂದು ಸಾಕಷ್ಟು ಫಿಟ್ನೆಸ್ ಪ್ರಿಯರು ಹೇಳುತ್ತಿರುತ್ತಾರೆ. ಇದಕ್ಕೆ ಪ್ರಮುಖ ಕಾರಣ ಚಯಾಪಚಯ. ದೇಹದ ಕೊಬ್ಬನ್ನು ಕರಗಿಸುವುದು ಹರಸಾಹಸವೆಂದೇ ಹೇಳಬಹುದು. ಇದಕ್ಕೆ ಮೆಟಬಾಲಿಸಂ ಕಾರ್ಯವನ್ನೂ ನಾವು ಹೆಚ್ಚಿಸಬೇಕು. ಮೊದಲಿಗೆ ಮೆಟಬಾಲಿಸಂ ಬಗ್ಗೆ ತಿಳಿದುಕೊಳ್ಳುವುದಾದರೆ, ವಿಶ್ರಾಂತ ಸಮಯದಲ್ಲೂ ಎಷ್ಟು ಪ್ರಯಾಣದಲ್ಲಿ ಕ್ಯಾಲೊರಿ ಬರ್ನ್ ಆಗುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಉದಾಹರಣೆಗೆ ಸುಮ್ಮನೆ ಮಾತನಾಡುತ್ತಿರುವಾಗ ಅಥವಾ ವ್ಯಾಯಾಮ ಮಾಡದೇ ಇರುವಾಗಲೂ ಕ್ಯಾಲೊರಿ ಬರ್ನ್ ಆಗುತ್ತಿರುತ್ತದೆ. ಇದನ್ನು ಬಿಎಂಆರ್ (ಬೇಸಿಕ್ ಮೆಟಬಾಲಿಸಂ ರೇಟ್) ಎಂದು ಹೇಳಲಾಗುತ್ತದೆ. ಇದಕ್ಕೆ ಚಯಾಪಚಯ ಕಾರಣ. ಇದರ ಕಾರ್ಯ ಹೆಚ್ಚಬೇಕಿದ್ದರೆ ಉತ್ತಮ ಡಯಟ್ ಅನುಸರಿಸಬೇಕು. ಗ್ರೀನ್ ಟೀ, ಶುಂಠಿ, ಶೇ. 90ರಷ್ಟು ಡಾರ್ಕ್ ಚಾಕೊಲೇಟ್ ಇರುವ ಕೋಕೊ ನಿಬ್ಸ್, ದಪ್ಪ ಮೆಣಸಿನಕಾಯಿಯಂತಹ ಆಹಾರ ಸೇವಿಸಬೇಕು. ಇದರ ಜತೆಗೆ ದೇಹದ ತೂಕ, ಡಂಬಲ್ಸ್, ರೆಸಿಸ್ಟನ್ಸ್ ಬ್ಯಾಂಡ್, ಮಿನಿ ಬ್ಯಾಂಡ್, ಸ್ಟೆಬಿಲಿಟಿ ಬಾಲ್, ಕೆಟಲ್ ಬೆಲ್ಸ್‌ನಂತಹ ಸಾಧನಗಳನ್ನು ಉಪಯೋಗಿಸಿ ಸ್ಟೆಂತ್ ಟ್ರೇನಿಂಗ್ ಮಾಡುವುದರಿಂದ ಚಯಾಪಚಯ ಹೆಚ್ಚುತ್ತದೆ. ಸುಮ್ಮನೆ ಕೂತಿದ್ದರೂ ಚಯಾಪಚಯ ಕಾರ್ಯ ನಡೆಯುತ್ತಿರುತ್ತದೆ. ಇದು ಮಸಲ್ ಬಿಲ್ಡ್ ಮಾಡುತ್ತದೆ. ತೂಕವನ್ನು ಸಹ ಸುಲಭವಾಗಿ ಇಳಿಸಬಹುದು. ಕೂತಲ್ಲೇ ಕ್ಯಾಲೊರಿ ಬರ್ನ್ ಮಾಡಬೇಕೆಂದರೆ ನಮ್ಮ ದೇಹದಲ್ಲಿ ಮಾಂಸಖಂಡಗಳ ಅಗತ್ಯತೆ ಹೆಚ್ಚು. 30 ವರ್ಷಗಳ ನಂತರ ಸ್ನಾಯು ಸವೆಯುತ್ತಿರುತ್ತದೆ. ಹಾಗಾಗಿ ವರ್ಕೌಟ್ ಮಾಡುವ ಮೂಲಕ ಅದನ್ನು ಮರಳಿ ಪಡೆಯಬಹುದು. ಇದರಿಂದ ಮೆಟಬಾಲಿಸಂ ಹೆಚ್ಚುತ್ತದೆ. ■



ವನಿತಾ ಅಶೋಕ್ |
ಫಿಟ್ ಇಂಡಿಯಾ ರಾಯಭಾರಿ

Vijaya karnataka Pg.08

Old coconut farms stunting productivity

PearlDSouza@timesofindia.com

Bengaluru: Post-pandemic demand for virgin oil, and heavy commercialisation of the tender variety, have been at the core of rising demand for coconuts. However, while the supply side has an easy fix the costs are a hurdle.

Scientists and experts who drive research and policy around coconuts in India say most fields have a fair share of "old and senile palms" — typically those 60 years or older and are now producing very few coconuts or none. The problem could be solved if: One, diseases are treated and pests eradicated; two, a more preventive measure — improve the quality of coconut plantations.

"More than 30% of Karnataka's coconut palm cultivation is old and senile, which is a major factor for production decline. Besides, there are pests and diseases," said B Hanumanthe Gowda, chief coconut development officer, Coconut Development Board.

But the difficulty in replacing palms with young, lively saplings — that would yield fruit in three years — is that uprooting is an expensive affair. Dr K Balachandra Hebbar, director, ICAR-Central Plantation Crops Research Institute (CPCRI), Kasaragod, said, "On an average the cost of uprooting a tree and replacing it with a vibrant sapling would be around Rs 2,000 per tree. So, incentives must match that."

Satyanarayan Udupa, a grower and district secretary of Bharatiya Kisan Sangh, echoed the concern: Chopping the tree, uprooting it, and replanting — including Rs 400 for a new plant, manure, and compost — will come up to at least Rs 1,500. "Govt stepping in to make it easier for us financially would help turn senile farms, which form 90% of plantations in coastal districts, into vibrant ones," Udupa said.

Gowda said farmers would need to share the cost burden. "The state govt provides Rs 1,000 per tree for up to 32 trees a hectare, and neighbouring states offer slightly more under the replanting and rejuvenation programme," he said.

Issue of funds

Udupa pointed out that even when a fraction of roughly 150 trees per hectare is replaced with new saplings, they tend to get overshadowed by already tall palms, stunting their growth.

"If farmers plan on taking loans to meet additional expenses, only those with large farms will have the money to invest. A larger portion of small landholders find it financially unviable, prompting them to maintain status quo," he said.

This lack of urgency contrasts sharply with the Union govt's push for higher productivity in the recently announced budget. Karnataka, which has the second-largest area under coconut cultivation, is the number one producer. "The opportunities are immense," said Hebbar. "We have 24 varieties and hybrids that can drive yields up. Value addition from coconuts is currently at 8%. We need to target 22% by 2035. Farmers' incomes will go up significantly, and they are aware of it. Some have been seeking guidance over the past two years, considering rising demand. Replacing old and senile farms is a very important step."

The other key issue is pest and disease control, added Kesavan Subaharan, principal scientist at ICAR-NBAIR, pointing to diseases such as root wilt, and insects such as red palm weevil.

TOP PRODUCERS

Karnataka	6,151 565
Tamil Nadu	6,092 493
Kerala	5,523 766

Million nuts | Thousand hectares | Source: Union ministry of agriculture and farmers welfare



Times of India Pg.06

ಕೇಂದ್ರ ಕೃಷಿ ಯೋಜನೆ ಜಾರಿಯಲ್ಲಿ ರಾಜ್ಯ ನಂ.1: ಸಚಿವ

ಪಿಎಂಎಫ್ ಎಂಇ ಅನುಷ್ಠಾನದಲ್ಲಿ ಮೊದಲ ಸ್ಥಾನ | 25ಕ್ಕೂ ಹೆಚ್ಚು ಕೃಷಿ ಉತ್ಪನ್ನಗಳಿಗೆ ಜಿಐ ಟ್ಯಾಗ್

■ ಉದಯವಾಣಿ ಸಮಾಚಾರ

ಬೆಂಗಳೂರು: ಕೇಂದ್ರ ಕೃಷಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದಲ್ಲಿ ಕರ್ನಾಟಕ ಮಾದರಿಯಾಗಿದ್ದು ಕೃಷಿ ಕ್ಷೇತ್ರದಲ್ಲಿ ರಫ್ತು ಮತ್ತು ಮೂಲಸೌಕರ್ಯ ವಿಸ್ತರಿಸಲು ಕೇಂದ್ರ ಸರ್ಕಾರದ ಬೆಂಬಲ ಅಗತ್ಯವಿದೆ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಹೇಳಿದರು.

ಕೃಷಿ ಇಲಾಖೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಏರ್ಪಡಿಸಿದ್ದ 3 ದಿನಗಳ ಅಂತಾರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ರೈತರನ್ನು ಸಬಲೀಕರಣಗೊಳಿಸಿ ಕೃಷಿ ಉದ್ಯಮಿಗಳಾಗಿ ರೂಪಿಸುವ ಉದ್ದೇಶದಿಂದ ಈ ಬಾರಿ ವಾಣಿಜ್ಯ ಮೇಳವನ್ನು ಉತ್ಪಾದನೋತ್ತರ ಕೃಷಿ, ಸಂಸ್ಕರಣೆ, ಮೌಲ್ಯವರ್ಧನೆ, ಬ್ರ್ಯಾಂಡಿಂಗ್, ಸಾಲ ಮೇಳದ ವಿಶಿಷ್ಟ ಪರಿಕಲ್ಪನೆಯೊಂದಿಗೆ ಆಯೋಜಿಸಲಾಗಿದೆ. ಕೇಂದ್ರದ ಪಿಎಂಎಫ್ಎಂಇ ಯೋಜನೆ ಅನುಷ್ಠಾನದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಸಾವಯವ ಕೃಷಿ, ಸಿರಿಧಾನ್ಯಗಳು ಮತ್ತು ಆಹಾರ ಸಂಸ್ಕರಣೆಗೆ ದೇಶದಲ್ಲೇ ಮೊದಲ ಆದ್ಯತೆ ನೀಡಿದ ರಾಜ್ಯವಾಗಿದೆ. ನಾಡಿನ 25 ಕ್ಕೂ ಹೆಚ್ಚು ಕೃಷಿ ಉತ್ಪನ್ನಗಳಿಗೆ ಭೌಗೋಳಿಕ ಸೂಚ್ಯಂಕ ಮಾನ್ಯತೆ ದೊರೆತಿದೆ ಎಂದರು.

2022-23ರಲ್ಲಿ ಕರ್ನಾಟಕವು ಸುಮಾರು 8 ಸಾವಿರ ಟನ್ ಸಿರಿಧಾನ್ಯ ಮತ್ತು ಸಿರಿಧಾನ್ಯ ಉತ್ಪನ್ನಗಳನ್ನು 36 ಕೋಟಿ ಮೌಲ್ಯದಲ್ಲಿ ರಫ್ತು ಮಾಡಿದೆ. ಇದರಲ್ಲಿ ದೇಶದ ಒಟ್ಟು ಸಿರಿಧಾನ್ಯ ರಫ್ತಿನ ಸುಮಾರು ಶೇ. 40 ಪಾಲು ಇದೆ ಎಂದರು. ರಾಜ್ಯದ ಸಿರಿಧಾನ್ಯ ಉತ್ಪನ್ನಗಳು ಅಮೆರಿಕಾ, ಆಸ್ಟ್ರೇಲಿಯಾ, ಕೆನಡಾ, ಮೊದಲಾದ ದೇಶಗಳಿಗೆ ರಫ್ತಾಗುತ್ತಿದೆ ಎಂದು ತಿಳಿಸಿದರು.

ಮುಕ್ತ ಮಾರುಕಟ್ಟೆ ಕಲ್ಪಿಸಿ



ಸಾವಯವ ಸಿರಿಧಾನ್ಯ ಬೆಳೆ ಮರೆತುಹೋಗುತ್ತಿದ್ದ ಸಂದರ್ಭದಲ್ಲಿ ಕರ್ನಾಟಕವು ಜಗತ್ತಿಗೆ ಪರಿಚಯಿಸುವ ಮೂಲಕ ಮಹತ್ವ ತಿಳಿಸಿದೆ. ರಾಜ್ಯದಿಂದ ಆರಂಭವಾಗಿರುವ ಆಂದೋಲನ ಇಂದು ಜಗತ್ತಿಗೆ ಹರಡಿದೆ. ಕೇಂದ್ರ ಸರ್ಕಾರ ಸಿರಿಧಾನ್ಯಗಳ ಮಾರಾಟಕ್ಕೆ ಜಾಗತಿಕವಾಗಿ ಮುಕ್ತ ಮಾರುಕಟ್ಟೆ ಅವಕಾಶ ಕಲ್ಪಿಸಬೇಕು.

● ಕೃಷ್ಣಬೈರೇಗೌಡ, ಕಂದಾಯ ಸಚಿವ

Udayavani Pg.06

ಬೆಲೆ ಕುಸಿತದಿಂದ ಬಿದಿರು ಬೆಳೆಗಾರರಿಗೆ ಸಂಕಷ್ಟ!

ಮೇದಾರಿಕೆ ಮಾಯ-ಬಿದಿರು ದರ ಪ್ರಪಾತಕ್ಕೆ | ಬೆಂಕಿ ಹಚ್ಚುತ್ತಿರುವ ಬೆಳೆಗಾರರು | ಬಿದಿರಿನ ಬದಲು ಕಬ್ಬಿಣ, ಪ್ಲಾಸ್ಟಿಕ್ ಪರಿಕರ

■ ಬಸವರಾಜ್ ಹೊಂಗಲ್

ಉದಯವಾಣಿ ಸಮಾಚಾರ

ಧಾರವಾಡ: ಸಾವಯವ ಮತ್ತು ಸುಸ್ಥಿರ ಬದುಕಿನ ಸಂಕೇತವಾಗಿದ್ದ ಬಿದಿರು ಕೃಷಿ ಪ್ರಪಾತಕ್ಕೆ ಕುಸಿದಿದೆ. ಬಿದಿರು ಬೆಳೆದ ಶೇ.90 ಬೆಳೆಗಾರರು ಆದಕ್ಕೆ ಸದ್ಯ ಬೆಂಕಿ ಹಚ್ಚಿ ಸುಟ್ಟು ಹಾಕುತ್ತಿದ್ದಾರೆ.



ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಸೇರಿ ಕಿತ್ತೂರು ಕರ್ನಾಟಕ ಭಾಗದ ಹೊಲಗಳಲ್ಲಿ ರೈತರು ಕೃಷಿ ಉಪಯೋಗಕ್ಕೆ ಮತ್ತು ಮಾರಾಟಕ್ಕೆಂದೇ 1995-2005ರ ವರೆಗೆ ನೆಟ್ಟಿದ್ದ ಸಾವಿರಾರು ಹೆಕ್ಟೇರ್ ಬಿದಿರು ಇಂದು ಯಾರೂ ಕೇಳದ ಸ್ಥಿತಿ ತಲುಪಿದೆ. ಹೊಲದಲ್ಲಿ ಬೆಳೆದ ಬಿದಿರನ್ನು ಕೊಂಡುಕೊಳ್ಳಲು ದಲ್ಲಾಳಿಗಳು ಮುಂದೆ ಬರುತ್ತಿಲ್ಲ. ಬಂದರೂ ಉತ್ತಮ ಬೆಲೆ ಕೊಡುತ್ತಿಲ್ಲ. ಹೀಗಾಗಿ ಕಳೆದ ಐದಾರು ವರ್ಷಗಳಿಂದ ರೈತರು ತಮ್ಮ ಹೊಲದ ಬದು, ಹಳ್ಳಕೊಳ್ಳದ ಕೊರಕಲಿನಲ್ಲಿ ಬೆಳೆದ ಬಿದಿರನ್ನು ಕತ್ತರಿಸಿ ಹಾಕಿ ಬೆಂಕಿ ಇಡುತ್ತಿದ್ದಾರೆ.

ಏನಾಯಿತು ಬಿದಿರಿಗೆ?: ಸಾಮಾನ್ಯವಾಗಿ ಬಿದಿರನ್ನು ಕೃಷಿ ಚಟುವಟಿಕೆಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತಿತ್ತು. ಚಕ್ಕಡಿ ಕಳಗ, ತಡಪಾಟು, ಧಾನ್ಯ ಸಂಗ್ರಹಣೆಗೆ ಭತ್ತದ ಖಣಜ, ಗಳಿಗಿ, ಬುಟ್ಟಿ, ಕೀರುವ ಮರ, ಗುಳಬುಟ್ಟಿ ಸೇರಿ ಅನೇಕಾನೇಕ ವಸ್ತುಗಳಿಗೆ ಬಿದಿರು ಬಳಕೆಯಾಗುತ್ತಿತ್ತು. ಇನ್ನುಳಿದಂತೆ ನಿಚ್ಚಣಿಕೆ (ಏಣಿ), ಮನೆಯ ತಾಟು, ಹೆಂಚು ಹಾಕುವ ರೀಪು, ಬಟ್ಟೆ ಒಣಗಿಸುವ ಕಟ್ಟಿಗೆ, ಕೊಟ್ಟಾರಿ, ಬಾರಕೋಲು ಹೀಗೆ ಕೃಷಿ ಚಟುವಟಿಕೆಗಳೆಲ್ಲದಕ್ಕೂ ಬಿದಿರು ಬಳಕೆಯಾಗುತ್ತಿತ್ತು. ಆದರ ಜಾಗಕ್ಕೆ ಕಬ್ಬಿಣದ ಪರಿಕರ, ಪ್ಲಾಸ್ಟಿಕ್ ವಸ್ತುಗಳು ಪ್ರವೇಶ ಪಡೆದಿವೆ. ಹೀಗಾಗಿ ಬಿದಿರಿನ ದರ ಪ್ರಪಾತಕ್ಕೆ ಕುಸಿದಿದೆ.

ಇನ್ನೊಂದೆಡೆ ಕಳೆದ 10 ವರ್ಷಗಳಲ್ಲಿ ಮೇದಾರಿಕೆಗೂ ಭಾರೀ ಹೊಡೆತ ಬಿದ್ದಿದ್ದು, ಅವರು ಬಿದಿರಿನಿಂದ ಮುಕ್ತಿ ಕೇಳುತ್ತಿದ್ದಾರೆ. ಕೊಂಚ ಶಕ್ತಿ ಇರುವವರು ಮಾತ್ರ ಕಷ್ಟಪಟ್ಟು ಮೇದಾರಿಕೆ ಮುನ್ನಡೆಸುತ್ತಿದ್ದಾರೆ. ಕರಕುಶಲ ವಸ್ತುಗಳ ತಯಾರಿಕೆಯಿಂದಲೂ ಇವರು ಹಿಂದೆ ಸರಿದಿದ್ದು ಬಿದಿರಿನ ಬಳಕೆಯೇ ನಿಂತು ಹೋದಂತಾಗಿದೆ.

ಮಾರುಕಟ್ಟೆಯಲ್ಲಿ ಬೆತ್ತದೇಟು: 2000ನೇ ಇಸ್ವಿಗೂ ಮುಂಚೆ ಕಾಗದ ಕಾರ್ಖಾನೆ, ಮನೆಗಳ ನಿರ್ಮಾಣ, ವಿಭಿನ್ನ ವಿನ್ಯಾಸದ ಹೊಟೇಲ್ ನಿರ್ಮಾಣ, ಅಲಂಕಾರಿಕ ವಸ್ತುಗಳ ತಯಾರಿಕೆಗೆ ಬಿದಿರು ಮಾರಾಟವಾಗುತ್ತಿತ್ತು. ಬಹುಮಹಡಿ ಕಟ್ಟಡಗಳ ನಿರ್ಮಾಣಕ್ಕೆ ಹೊರಗೆ ಸಾರು ಕಟ್ಟಲು ಬಿಕರಿಯಾಗುತ್ತಿತ್ತು. ಹುಬ್ಬಳ್ಳಿ ಮತ್ತು ಬೆಳಗಾವಿಯಲ್ಲಿ ನೂರಾರು ಜನ ಬಿದಿರು ಕೊಳ್ಳುವ ವ್ಯಾಪಾರಿಗಳಿದ್ದರು. ಕೊಂಡುಕೊಳ್ಳುವ ದಲ್ಲಾಳಿಗಳು ಇದ್ದರು. ಆದರೆ, ಈಗ ಮಾರುಕಟ್ಟೆಯಲ್ಲಿ ಬಿದಿರು ಕೇಳುವವರೇ ಇಲ್ಲವಾಗಿದೆ.

7 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬಿದಿರು

ಕಿತ್ತೂರು ಕರ್ನಾಟಕದ ಭಾಗದಲ್ಲಿ 7 ಸಾವಿರ ಹೆಕ್ಟೇರ್ಪ್ರದೇಶದಲ್ಲಿ ರೈತರು ಮತ್ತು ಅರಣ್ಯ ಇಲಾಖೆ ಬೆಳೆದ ಬಿದಿರು ಇಂದು ಕಟಾವಿಗೆ ಬಂದಿದೆ. ಹೊಲಗಳ ಬದುಗಳಲ್ಲಿ ಸಾಕಷ್ಟು ಬಿದಿರು ಬೆಳೆದು ನಿಂತಿದೆ. ಇದೀಗ ಬೆಲೆ ಕುಸಿತದಿಂದ ಇದನ್ನು ಯಾರೂ ಕೊಂಡುಕೊಳ್ಳುತ್ತಿಲ್ಲ. ಬಿದಿರು ಬೆಳೆದ ರೈತರು ಇದನ್ನು ತೆಗೆದು ಹಾಕಲು ಕೈಯಿಂದ ಮತ್ತಷ್ಟು ಹಣ ಹಾಕಬೇಕಾಗಿದೆ.

> ಬಿದಿರು ಆಧಾರಿತ ವಸ್ತುಗಳ ಬಳಕೆ ಸಂಪೂರ್ಣ ನಿಂತು ಹೋಗಿದೆ. ಈಗೇನಿದ್ದರೂ ಪ್ಲಾಸ್ಟಿಕ್ ವಸ್ತುಗಳು. ಹೀಗಾಗಿ ನಾವು ಬಿದಿರು ಖರೀದಿ ನಿಲ್ಲಿಸಿದ್ದೇವೆ. ಸಹಜವಾಗಿಯೇ ಬೆಳೆದವರಿಗೂ ಇದರಿಂದ ಏನೂ ಪ್ರಯೋಜನವಾಗುತ್ತಿಲ್ಲ.
>
> ● ಕಲ್ಲೇಶ್ ಕೆರೂರ, ಬಿದಿರು ಗುತ್ತಿಗೆದಾರ

> ಬಿದಿರು ಕಟಾವು ಮಾಡುವ ಗ್ಯಾಂಗ್ ಗಳೇ ಸಿಗುತ್ತಿಲ್ಲ. ಹೀಗಾಗಿ ನಾನೇ ಕಡಿದು ಹಳ್ಳಕ್ಕೆ ಹಾಕಿ, ಸುಟ್ಟಿದ್ದೇನೆ.
>
> ● ವಿಠ್ಠಲ ಕಲಸಣ್ಣವರ, ಮುರಕಟ್ಟಿ ರೈತ

Udayavani Pg.06

vittasuggi@gmail.com

ವಿತ್ತವಾಣಿ

ಮನೆ ಮನೆಯ ಮನಿಮಾತು

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » BENGALURU

9c
ಸೋಮವಾರ
9 ಫೆಬ್ರವರಿ 2026
9 FEBRUARY 2026



ತೆಂಗಿನ ವೈಜ್ಞಾನಿಕ ಸಮೀಕ್ಷೆಗೆ ಗ್ರಹಣ



ಸೋರಲಮಾವು ಡಾ. ಶ್ರೀಹರ್ಷ ತುಮಕೂರು

ದಶಕದಿಂದ ತೆಂಗು ಬೆಳೆಗಾರರನ್ನು ಕಾಡುತ್ತಿರುವ ಕಪ್ಪು ತಲೆ ಹುಳು ಕಾಟಕ್ಕೆ ಪರಿಹಾರ ಸಿಗುತ್ತದೆ ಎಂಬ ಆಶಾಭಾವನೆಯಲ್ಲಿದ್ದ ಬೆಳೆಗಾರರಿಗೆ ಸರ್ಕಾರ ಮತ್ತೆ ನಿರಾಸೆ ಮೂಡಿಸಿದೆ. ರಾಜ್ಯದಲ್ಲಿ ಬೆಳೆಗಾರರ ನೆಮ್ಮದಿ ಕೆಡಿಸಿರುವ ಕಪ್ಪುತಲೆ ಹುಳು, ನುಸಿ, ಸೊರಗು, ಬೆಂಕಿ, ಹರಳು ಉದುರುವ ರೋಗಗಳಿಗೆ ತುತ್ತಾಗಿರುವ ತೆಂಗಿನ ಮರಗಳ ವೈಮಾನಿಕ ಸಮೀಕ್ಷೆಗೆ ಆಸಕ್ತಿ ತೋರಿದ್ದ ಸರ್ಕಾರವೇ ಇದೀಗ ಎಳ್ಳುನೀರು ಬಿಟ್ಟಿದೆ. 2025-26ರ ಬಜೆಟ್‌ನಲ್ಲಿ 'ತೆಂಗಿನ ಕಪ್ಪುತಲೆ ಹುಳು ಬಾಧೆ'ಯ ವೈಮಾನಿಕ ಸಮೀಕ್ಷೆ ನಡೆಸಿ ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಘೋಷಿಸಿತ್ತು. ಜುಲೈ ಅಂತ್ಯದೊಳಗೆ ಸಮೀಕ್ಷೆ ಪೂರ್ಣಗೊಳಿಸುವುದಾಗಿ 25 ಲಕ್ಷ ರೂ. ಅನುದಾನ ಒದಗಿಸಿ ಆರಂಭಿಕ ಶೂರತ್ವ ತೋರಿದ್ದ ಸರ್ಕಾರ ನಂತರ ಸಮೀಕ್ಷೆಯನ್ನೇ ಮರೆತಿರುವುದು ತೆಂಗು ಬೆಳೆಗಾರರನ್ನು ಸಂಕಷ್ಟಕ್ಕೆ ಸಿಲುಕುವಂತೆ ಮಾಡಿದೆ.

ಮೊಬೈಲ್ ಆ್ಯಪ್ ಮೂಲಕ ಕಳೆದ ಏಪ್ರಿಲ್‌ನಲ್ಲಿ ಸರ್ಕಾರ ಆರಂಭಿಸಿದ್ದ ಸಮೀಕ್ಷೆ ಅಪೂರ್ಣವಾಗಿದ್ದು, ಸಂಕಷ್ಟದಲ್ಲಿರುವ ತೆಂಗು ಬೆಳೆಗಾರರನ್ನು ಸರ್ಕಾರ ಸಂಪೂರ್ಣ ಮರೆತಿದೆ.

ಸಮೀಕ್ಷಾ ಕಾರ್ಯಕ್ರಮಕ್ಕೆ 1351 ಸ್ಥಳೀಯ ಖಾಸಗಿ ಸಿಬ್ಬಂದಿ(ಪೆಸ್ಟ್ ಸರ್ವೇಯರ್)ಯನ್ನು ನಿಯೋಜಿಸಲಾಗಿದೆ. ಆದರೆ, ಅವರಿಗೆ ನೀಡಲು ಹಣವಿಲ್ಲದೆ ಸಮೀಕ್ಷೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ತುಮಕೂರು, ಹಾಸನ, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಬೆಂಗಳೂರು ದಕ್ಷಿಣ(ರಾಮನಗರ), ಚಿತ್ರದುರ್ಗ, ದಾವಣಗೆರೆ ಹಾಗೂ ಚಾಮರಾಜನಗರ ಜಿಲ್ಲೆಯ 58 ತಾಲೂಕುಗಳನ್ನು ರಾಜ್ಯದ ತೆಂಗು ಬೆಳೆಯುವ ಪ್ರಮುಖ ಪ್ರದೇಶ ಎಂದು ಗುರುತಿಸಲಾಗಿದೆ. ಈ ಭಾಗದಲ್ಲಿ ಸಮೀಕ್ಷೆಗೆ ಆದ್ಯತೆ ನೀಡಲು ಸರ್ಕಾರ ನಿರ್ಧರಿಸಿದೆಯಾದರೂ ಎಲ್ಲಿಯೂ ಪೂರ್ಣವಾಗಿಲ್ಲ. ರಾಜ್ಯದ 30 ಜಿಲ್ಲೆಗಳಲ್ಲಿಯೂ ತೆಂಗು ಬೆಳೆಯುತ್ತಿರುವುದು ವಿಶೇಷ ಎನಿಸಿದೆ. 9 ಜಿಲ್ಲೆಗಳ ಪ್ರಮುಖ ವಾಣಿಜ್ಯ ಬೆಳೆಯಾಗಿರುವ ತೆಂಗನ್ನು ಅಂದಾಜು 6 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ಇತ್ತೀಚೆಗೆ ಕೊಬ್ಬರಿ ಬೆಲೆ ಹೆಚ್ಚಾಗಿದ್ದರೂ ಇಳುವರಿ ಕುಸಿತದಿಂದ ರೈತರಿಗೆ ಲಾಭವಿಲ್ಲದಂತಾಗಿದೆ.

'ತೆಂಗಿನಲ್ಲಿ ಕಪ್ಪುತಲೆ ಹುಳು ಬಾಧೆ ಕುರಿತ ವೈಜ್ಞಾನಿಕ ಸಮೀಕ್ಷೆ ನಡೆಸಿ, ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವ' ಬಜೆಟ್ ಘೋಷಣೆಯಂತೆ ಸಮೀಕ್ಷೆಗೆ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಸರ್ಕಾರ ಈಗಾಗಲೇ 25 ಲಕ್ಷ ರೂ. ಅನುದಾನ ಒದಗಿಸಿದೆ. ಅಂದಾಜಿಸಿರುವ ಪ್ರದೇಶದಲ್ಲಿ ಸಮೀಕ್ಷೆ ಪೂರ್ಣಗೊಳಿಸಲು ಅವಶ್ಯವಿರುವ 2 ಕೋಟಿ ರೂ. ಅನುದಾನಕ್ಕೆ ಆರ್ಥಿಕ ಇಲಾಖೆ ಸಹಮತಿ ಕೋರಲಾಗಿದೆ. ಉಷ್ಣಾಂಶ ಕಡಿಮೆ ಇರುವ ಕಾರಣಕ್ಕೆ ಸಮೀಕ್ಷಾ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

| ಎಸ್.ಎಸ್.ಮಲ್ಲಿಕಾರ್ಜುನ್
ತೋಟಗಾರಿಕೆ ಸಚಿವ



ಅನುದಾನ ಕೊರತೆ ಸರ್ವೇ ನಿಲ್ಲಿಸಿದ ಇಲಾಖೆ

ಬಿಡುಗಡೆಯಾಗದ ಅಗತ್ಯ ಹಣ

ರಾಜ್ಯದಲ್ಲಿ ಕಪ್ಪುತಲೆ ಹುಳುವಿನಿಂದ 62,044 ಹೆಕ್ಟೇರ್ ಪ್ರದೇಶ ಹಾಗೂ ಬಿಳಿನೊಣದಿಂದ 3,24,259 ಹೆಕ್ಟೇರ್ ಪ್ರದೇಶ ಬಾಧಿತವಾಗಿರುವ ಬಗ್ಗೆ ಅಂದಾಜಿಸಲಾಗಿದೆ. ಈ ಕುರಿತಾದ ಸಮೀಕ್ಷೆಗೆ ಕನಿಷ್ಠ 2 ಕೋಟಿ ರೂ. ಅನುದಾನದ ಅಗತ್ಯವಿದೆ. ಆದರೆ, ಸರ್ಕಾರ ತೋಟಗಾರಿಕೆ ಇಲಾಖೆಗೆ ಆರಂಭಿಕವಾಗಿ ಕೇವಲ 25 ಲಕ್ಷ ರೂ. ನೀಡಿದ್ದು ಬಿಟ್ಟರೆ ಮತ್ತೆ ಯಾವುದೇ ಅನುದಾನ ನೀಡದಿರುವುದು ಸಮೀಕ್ಷೆಯನ್ನು ಸ್ಥಗಿತಗೊಳಿಸುವಂತೆ ಮಾಡಿದೆ. ತೋಟಗಾರಿಕೆ ಇಲಾಖೆ ನೇಮಿಸಿಕೊಂಡಿರುವ ಪೆಸ್ಟ್ ಸರ್ವೇಯರ್ ಒಂದು ಜಮೀನು ಸಮೀಕ್ಷೆ ಮಾಡಿದರೆ 10 ರೂ. ಗೌರವಧನ ನೀಡಬೇಕಿದೆ. ಕಪ್ಪುತಲೆ ಹುಳು ಜತೆಗೆ ಬಿಳಿನೊಣದ ಬಾಧೆಯ ಬಗ್ಗೆಯೂ ಸಮೀಕ್ಷೆ ನಡೆಸುವಂತೆ ಖುದ್ದು ಸಿಎಂ ಸಿದ್ದರಾಮಯ್ಯ ಸೂಚಿಸಿದ್ದರು. ಸಿಎಂ ನೀಡಿದ್ದ ಸೂಚನೆ ಸದನದಲ್ಲಿ ಶಾಸಕರನ್ನು ತೃಪ್ತಿಪಡಿಸಿದ್ದು ಬಿಟ್ಟರೆ ತೆಂಗಿನ ತೋಟ ತಲುಪಿಲ್ಲ. ಸರ್ಕಾರದ ಅನುದಾನಕ್ಕಾಗಿ ಆರ್ಥಿಕ ಇಲಾಖೆಗೆ ಪತ್ರ ಬರೆದು ಸುಮ್ಮನಾಗಿರುವ ತೋಟಗಾರಿಕೆ ಇಲಾಖೆ ಹೆಚ್ಚಿನ ಉಷ್ಣಾಂಶವಿರುವ ಸಮಯದಲ್ಲಿ ಸಮೀಕ್ಷೆ ನಡೆಸಿದರೆ ಮಾತ್ರ ನಿಖರ ಮಾಹಿತಿ ಲಭ್ಯವಾಗಲಿದೆ. ಪ್ರಸ್ತುತ ಚಳಿ ಹೆಚ್ಚಾಗಿರುವ ಕಾರಣದಿಂದ ಸಮೀಕ್ಷೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಉತ್ತರಿಸಿದೆ.

ಕಪ್ಪುತಲೆ ಹುಳು ಸಮೀಕ್ಷೆಯ ಪ್ರಗತಿ

ಜಿಲ್ಲೆ	ನಡೆದಿರುವ ಸಮೀಕ್ಷೆ(ಶೇ.)	ಬಾಧಿತ ಮರಗಳು
ರಾಮನಗರ	12.87	96,900
ತುಮಕೂರು	18.53	4,09,440
ಚಿತ್ರದುರ್ಗ	18.73	2,26,418
ಚಿಕ್ಕಮಗಳೂರು	21.00	3,94,014
ದಾವಣಗೆರೆ	37.40	1,27,492
ಮಂಡ್ಯ	49.67	5,14,156
ಚಾಮರಾಜನಗರ	51.66	1,99,981
ಮೈಸೂರು	54.54	6,20,776
ಹಾಸನ	61.49	12,88,179



ಸಾವಯವದಿಂದ ನಿರಂತರ ಆದಾಯ

ಬದುಕು ಕಂಡುಕೊಂಡ ನಿಂಗಪ್ಪ ಚಿಲವಾಡಗಿ

ಶ್ರೀನಾಥ ಮರಕುಂಬಿ ಗಂಗಾವತಿ

ಸಾವಯವ ಬೇಸಾಯ ಪದ್ಧತಿ ಮೂಲಕವೂ ನಾನಾ ಬೆಳೆ ಬೆಳೆದು ನಿತ್ಯವೂ ಆದಾಯ ಗಳಿಸಬಹುದು ಎಂಬುದನ್ನು ಇಲ್ಲೊಬ್ಬ ರೈತರು ತೋರಿಸಿಕೊಟ್ಟಿದ್ದಾರೆ. ಕೊಳವೆಬಾವಿ ನೀರಿನಲ್ಲಿ ಅರಣ್ಯ ಕೃಷಿ, ಪುಷ್ಪ ಕೃಷಿ, ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತಿರುವ ತಾಲೂಕಿನ ಬೆಳಗಟ್ಟಿ ಗ್ರಾಮದ ನಿಂಗಪ್ಪ ಚಿಲವಾಡಗಿ ಇತರ ಕೃಷಿಕರಿಗೆ ಮಾದರಿಯಾಗಿದ್ದಾರೆ.

52 ವರ್ಷದ ನಿಂಗಪ್ಪ 4.6 ಎಕರೆ ಜಮೀನಿನಲ್ಲಿ ಮಿಶ್ರಪದ್ಧತಿ ಕೃಷಿ ಆಳವಡಿಸಿಕೊಂಡಿದ್ದಾರೆ. ಸಾವಿರ ಎಲಕ್ಕಿ ಬಾಳೆ, 400 ಶ್ರೀಗಂಧ, ನೇರಳೆ ಮತ್ತು ಚಿಕ್ಕು ತಲಾ 60, 100 ಮಾವು, 70 ತೆಂಗು, 150 ಮಹಾಗನಿ ಮತ್ತು 65 ಮಲೇಷಿಯನ್ ಗ್ರೀನ್ ತೆಂಗನ್ನು ಪೋಷಿಸುತ್ತಿದ್ದಾರೆ. ಈ ಪೈಕಿ ಬಾಳೆ, ತೆಂಗು, ಚಿಕ್ಕು, ನೇರಳೆ, ಮಾವಿನ ಫಸಲು ಈಗಾಗಲೇ ಪಡೆದಿದ್ದು, ಮಲೇಷಿಯನ್ ಗ್ರೀನ್ ತೆಂಗು ಮತ್ತು ಶ್ರೀಗಂಧದ ಫಸಲಿಗಾಗಿ ಕಾಯುತ್ತಿದ್ದಾರೆ.

ಹೂವು-ತರಕಾರಿಯಿಂದ ನಿತ್ಯ ಆದಾಯ : ನಿರಂತರ ಆದಾಯಕ್ಕಾಗಿ ನಿಂಗಪ್ಪ ಅವರು ಸಾಲಿನ ಮಧ್ಯೆ ಸುಗಂಧರಾಜ, ಕಾಕಡ, ಸೂಜಿಮಲ್ಲಿಗೆ ಬೆಳೆದು, ಪ್ರತಿದಿನ ಮಾರುಕಟ್ಟೆಗೆ ಸಾಗಿಸುತ್ತಾರೆ. ಕೆಲವೊಮ್ಮೆ ವ್ಯಾಪಾರಿಗಳು ತೋಟಕ್ಕೆ ಬಂದು ಖರೀದಿಸುತ್ತಾರೆ. ಪೇರಲ ಕೃಷಿಯಿಂದಲೂ ಆದಾಯ ಗಳಿಸಿದ್ದಾರೆ. ಸದ್ಯ 150 ಲಿಂಬೆ ನಾಟಿ ಮಾಡಿದ್ದು, ಗಲಾಟೆ ಪುಷ್ಪವೂ ಇದೆ. ಒಂದು ಫಸಲಿನ ನಂತರ ಮತ್ತೊಂದು ಫಸಲು ಎಂಬಂತೆ ನಿರಂತರವಾಗಿ ಕಟಾವು ಹಾಗೂ ನಾಟಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹೂವು ಮಾರಾಟದಿಂದಲೇ ನಿತ್ಯವೂ 2000-3000 ರೂ.ಗಳಿಸುತ್ತಿದ್ದಾರೆ. ಬೆಳೆಗಳ ಖರ್ಚು ಹೊರತುಪಡಿಸಿ ವಾರ್ಷಿಕ ನಾಲ್ಕೈದು ಲಕ್ಷ ರೂ. ಆದಾಯ ಗಳಿಸುತ್ತಿದ್ದಾರೆ.

ಭೂಮಿಯ ಫಲವತ್ತತೆ ಕಾಯ್ದುಕೊಳ್ಳಲು ಕೇವಲ ಸಾವಯವ ಪದ್ಧತಿ ಅನುಸರಿಸುತ್ತಿದ್ದಾರೆ. ಏಳೆಂಟು ಜವಾರಿ, ಒಂದು ಗಿರ್ ಹಸು ಸಾಕಿದ್ದಾರೆ. ಅವುಗಳ ಗೊಬ್ಬರ, ಜೀವಾಮೃತ ಮತ್ತು ಎಲೆ ತ್ಯಾಜ್ಯ ಗೊಬ್ಬರವನ್ನು ಹೇರಳವಾಗಿ ಕೃಷಿಗೆ ಹಾಕುತ್ತಾರೆ.

ಪನ್ನೀರ್ ಕೃಷಿಯಲ್ಲಿ ಯಶಸ್ಸು: ಅರೆ ಮಸಾರಿ, ಅರೆ ಎರೆಭೂಮಿಗಳು ಅಥವಾ ಕೆಲವು ತೋಟಗಾರಿಕೆ ಬೆಳೆಗಳಿಗೆ ಮೀಸಲಾಗಿರುವ ಈ ಭಾಗದಲ್ಲಿ ಪನ್ನೀರ್ ಪತ್ರೆ ಕೃಷಿ ಮಾಡುವುದು ಸವಾಲಿನ ಕೆಲಸ. ಕೃಷಿ ತಜ್ಞರು ಸಹ ಈ ಬೆಳೆ ಫಸಲು ಕೊಡಲ್ಲ ಎಂದು ಹೇಳಿದ್ದರಂತೆ. ಆದರೆ, ನಿಂಗಪ್ಪ ಪನ್ನೀರ್ ಬೆಳೆದು ಉತ್ತಮ ಆದಾಯ ಗಳಿಸಿದ್ದಾರೆ. ಸದ್ಯ ಶ್ರೀಗಂಧ ಮರಗಳ ಸಾಲಿನಲ್ಲಿ ಕಾಡುಬದನೆ ನಾಟಿ ಮಾಡಿದ್ದಾರೆ. ಈ ಬೆಳೆ ಮೂರು ವರ್ಷಗಳವರೆಗೆ ಫಸಲು ಕೊಡಲಿದೆ.



ಬಾಲ್ಯದಿಂದಲೂ ಕೃಷಿ ಬದುಕಿಗೆ ಅಣಿಯಾಗಿರುವೆ. ಮಳೆಯಾಶ್ರಿತ ಬೆಳೆಗಳನ್ನು ಬೆಳೆದಿರುವೆ. ಈಗ ತೋಟಗಾರಿಕೆ ಕೃಷಿಯಲ್ಲಿ ತೊಡಗಿದ್ದೇನೆ. ರಸಗೊಬ್ಬರ ಬಳಸದೆ ಸಾವಯವ ಪದ್ಧತಿಯಲ್ಲೇ ಕೃಷಿ ಮಾಡುತ್ತಿದ್ದೇನೆ. ಭೂಮಿಯ ಫಲವತ್ತತೆ ಬೆಳೆಗಳಿಗೆ ಮುಖ್ಯವಾಗುತ್ತದೆ.

| ನಿಂಗಪ್ಪ ಚಿಲವಾಡಗಿ
ಸಾವಯವ ಕೃಷಿಕ, ಬೆಳಗಟ್ಟಿ



ಅರಣ್ಯ ಸೃಷ್ಟಿಸಿದ ದಂತ ವೈದ್ಯ!



ಶಿವಾನಂದ ಹಿರೇಮಠ ಗದಗ

ನಮ್ಮ ಸುತ್ತಮುತ್ತಲಿನ ವಾತಾವರಣ, ಪರಿಸರ ಹಾಗೂ ಕೆಲ ಅರಣ್ಯ ಪ್ರದೇಶಗಳು ಕಾಂಕ್ರೀಟ್ ಕಾಡಾಗಿ ಬದಲಾಗುತ್ತಿರುವ ಸನ್ನಿವೇಶದಲ್ಲಿ ಪರಿಸರ ಪ್ರೇಮಿಯೊಬ್ಬರು 11 ಎಕರೆ ಪಿತ್ರಾರ್ಜಿತ ಕೃಷಿ ಜಮೀನನ್ನು ಅರಣ್ಯವಾಗಿ ಪರಿವರ್ತಿಸುವ ಮೂಲಕ ಪರಿಸರ ಪ್ರೇಮ ಮೆರೆಯುತ್ತಿದ್ದಾರೆ. ಗದಗದಲ್ಲಿ ದಂತ ವೈದ್ಯರಾಗಿರುವ ಮೂಲತಃ ರೋಣ ತಾಲೂಕು ಮಲ್ಲಾಪುರದ ಡಾ.ಪ್ರದೀಪ ಉಗಲಾಟ ಅವರಿಗೆ ಹುಯಿಲಗೋಳ-ಗಾವರವಾಡ ಗ್ರಾಮದ ಮಧ್ಯೆ ಕಪ್ಪು ಮಣ್ಣಿನ 11 ಎಕರೆ ಜಮೀನು ಇದೆ. ಅವರು 9 ವರ್ಷದ ಹಿಂದೆ, ಮಾನವ ನಿರ್ಮಿತ ಅರಣ್ಯದ ಕನಸು ಕಂಡರು.

ವೈದ್ಯರ ಕೃಷಿ ಭೂಮಿಯಲ್ಲಿ ಕೊಳವೆ ಬಾವಿ ಇಲ್ಲ, ಫಲವತ್ತಾದ ಮಣ್ಣೂ ಇಲ್ಲ. ಆದಾಗ್ಯೂ ಅರಣ್ಯ ಇಲಾಖೆ ನಾಚುವಂತೆ ಜಮೀನಿನ 7 ಎಕರೆ ಪ್ರದೇಶದಲ್ಲಿ ಕರಿಜಾಲಿ, ಬೇವು, ಹೆಬ್ಬೇವು, ಬನ್ನಿ, ಮಹಾಗನಿ, ಬಿದಿರು, ಹುಣಸೆ, ಮಲೆನಾಡ ಹುಣಸೆ, ಪೇರಲ, ಸಾಗವಾನಿ, ರೋಸ್ ವುಡ್ ಸೇರಿ 150ಕ್ಕೂ ಹೆಚ್ಚು ವಿವಿಧ ಬಗೆಯ 15 ಸಾವಿರಕ್ಕೂ ಹೆಚ್ಚು ಗಿಡಗಳನ್ನು ಬೆಳೆಸಿದ್ದಾರೆ. ಉಳಿದ ಜಾಗದಲ್ಲಿ ನೈಸರ್ಗಿಕವಾಗಿ ಹುಲ್ಲು ಬೆಳೆಯಲು ಬಿಡಲಾಗಿದೆ.ಇವರು ಪೋಷಿಸಿದ ಗಿಡಗಳು 9 ವರ್ಷದಲ್ಲಿ 15 ರಿಂದ 20 ಅಡಿ ಎತ್ತರ ಬೆಳೆದಿವೆ.

ಹಾರಿಬಂದ ಹಕ್ಕಿಗಳು: ನೈಸರ್ಗಿಕ ಅರಣ್ಯಕ್ಕೆ ಪಕ್ಷಿಗಳು ಎಲ್ಲೆಲ್ಲಿಂದಲೋ ಬಂದಿವೆ. ಗೂಡು ಕಟ್ಟಿಕೊಂಡು, ಸೀತಾಫಲ, ಪೇರಲ, ಹಲಸು, ನೆಲ್ಲಿ, ಹುಣಸೆ ಇತ್ಯಾದಿ ಹಣ್ಣು ಹಂಪಲುಗಳನ್ನು ತಿಂದು ಸ್ವಚ್ಛಂದವಾಗಿ ನಲಿದಾಡಿಕೊಂಡಿವೆ. ಅಳಿಲು ಸೇರಿ ಸಣ್ಣ ಪ್ರಭೇದದ ಪ್ರಾಣಿಗಳು, ಜೇಡ ಇತ್ಯಾದಿ ಕೀಟಗಳು ಮನೆ ಮಾಡಿಕೊಂಡಿವೆ. ಉಗಲಾಟ ಅವರು ಕಾಡು ನಿರ್ಮಾಣಕ್ಕಾಗಿ 16 ಲಕ್ಷ ರೂ.ಗಳನ್ನು ವಿನಿಯೋಗಿಸಿದ್ದಾರೆ. ಬ್ಯಾಂಕ್ ಠೇವಣಿ, ವಿವಿಧ ಹೂಡಿಕೆಗಳನ್ನು ಬೆಳೆಸುವ ಉದ್ಯೋಗಸ್ಥರ ಮಧ್ಯೆ ಇವರು ವಿಭಿನ್ನವಾಗಿ ಗುರುತಿಸಿಕೊಂಡಿರುವುದಕ್ಕೆ ಕುಟುಂಬದ ಪ್ರೋತ್ಸಾಹ, ಬೆಂಬಲವೂ ಇದೆ.



ನಮ್ಮ ಭಾಗದಲ್ಲಿ ಮಳೆ ಕೊರತೆ ಸಾಮಾನ್ಯ. ವಾಣಿಜ್ಯ ಬೆಳೆ ಬೆಳೆಯುವ ಸಾಹಸಕ್ಕಿಂತ ಆರೆ ಶುಷ್ಕ ಪರಿಸ್ಥಿತಿಗಳಲ್ಲಿ ಬೆಳೆಯುವ ಸಸಿಗಳನ್ನು ತಂದು ನೆಡತೊಡಗಿದೆ. ಹೊಲವನ್ನು ಕಾಡಾಗಿಸಬೇಕು ಎಂಬ ಕನಸು ನನಸಾಗಿದೆ. ಹಣದ ಬದಲಾಗಿ ತೃಪ್ತಿಯ ಹಿಂದೆ ಹೋಗಿದ್ದರಿಂದ ಜಮೀನು ಅನೇಕರನ್ನು ಆಕರ್ಷಿಸುವಂತಾಗಿದೆ.

| ಡಾ. ಪ್ರದೀಪ ಉಗಲಾಟ ದಂತ ವೈದ್ಯ

ಮುಂದಿನ ಜನಾಂಗಕ್ಕೆ ಉತ್ತಮ ಪರಿಸರದ ಮಹತ್ವ ತಿಳಿಸುವಂಥ ಕೃತಕ ಅರಣ್ಯ ನಿರ್ಮಿಸಿರುವುದು ಪ್ರಶಂಸನೀಯ. ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳು ಆರೋಗ್ಯಕರ ಪರಿಸರ ಹೊಂದಲು ಇಂತಹ ಅರಣ್ಯಗಳಿಗೆ ಸರ್ಕಾರ ಪ್ರೋತ್ಸಾಹ ನೀಡಬೇಕಿದೆ.

| ಪ್ರೊ. ಬಂದೇನವಾಬ್ ರಾಮದುರ್ಗ
ಔಷಧ ಶಾಸ್ತ್ರಜ್ಞ

ದಂತ ವೈದ್ಯರ ಸಾಧನೆ ಮೆಚ್ಚಲೇಬೇಕಾಗಿದೆ. ಕಿರು ಅರಣ್ಯ ಜೀವ ವೈವಿಧ್ಯ ಶ್ರೀಮಂತಿಕೆಯಿಂದ ಕೂಡಿದೆ. ಹುಲ್ಲುಗಾವಲೂ ಇದೆ. ಅವರ ಈ ಪರಿಸರ ಪ್ರೀತಿ ಮತ್ತು ಗೌರವ ಇಂದಿನ ಪೀಳಿಗೆಗೆ ಸ್ಫೂರ್ತಿದಾಯಕ.

| ಡಾ. ಮಂಜುನಾಥ ನಾಯಕ
ಜೀವವೈವಿಧ್ಯ ವಿಜ್ಞಾನಿ

Vijayavani Pg.9c

ಲವಲ VK
ಫಿಟ್ನೆಸ್ ಫಂಡಾ

ಚಯಾಪಚಯ ಕಾರ್ಯ ಹೆಚ್ಚಿಸಿ



ಎಷ್ಟೇ ಪ್ರಯತ್ನಪಟ್ಟರೂ ವೇಯಿಂಗ್ ಸ್ಕೇಲ್‌ನಲ್ಲಿ ತೋರಿಸುವ ಸಂಖ್ಯೆ ಬದಲಾಗುತ್ತಲೇ ಇಲ್ಲ ಎಂದು ಸಾಕಷ್ಟು ಫಿಟ್ನೆಸ್ ಪ್ರಿಯರು ಹೇಳುತ್ತಿರುತ್ತಾರೆ. ಇದಕ್ಕೆ ಪ್ರಮುಖ ಕಾರಣ ಚಯಾಪಚಯ. ದೇಹದ ಕೊಬ್ಬನ್ನು ಕರಗಿಸುವುದು ಹರಸಾಹಸವೆಂದೇ ಹೇಳಬಹುದು. ಇದಕ್ಕೆ ಮೆಟಬಾಲಿಸಂ ಕಾರ್ಯವನ್ನೂ ನಾವು ಹೆಚ್ಚಿಸಬೇಕು. ಮೊದಲಿಗೆ ಮೆಟಬಾಲಿಸಂ ಬಗ್ಗೆ ತಿಳಿದುಕೊಳ್ಳುವುದಾದರೆ, ವಿಶ್ರಾಂತ ಸಮಯದಲ್ಲೂ ಎಷ್ಟು ಪ್ರಯಾಣದಲ್ಲಿ ಕ್ಯಾಲೊರಿ ಬರ್ನ್ ಆಗುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಉದಾಹರಣೆಗೆ ಸುಮ್ಮನೆ ಮಾತನಾಡುತ್ತಿರುವಾಗ ಅಥವಾ ವ್ಯಾಯಾಮ ಮಾಡದೇ ಇರುವಾಗಲೂ ಕ್ಯಾಲೊರಿ ಬರ್ನ್ ಆಗುತ್ತಿರುತ್ತದೆ. ಇದನ್ನು ಬಿಎಂಆರ್ (ಬೇಸಿಕ್ ಮೆಟಬಾಲಿಸಂ ರೇಟ್) ಎಂದು ಹೇಳಲಾಗುತ್ತದೆ. ಇದಕ್ಕೆ ಚಯಾಪಚಯ ಕಾರಣ. ಇದರ ಕಾರ್ಯ ಹೆಚ್ಚಬೇಕಿದ್ದರೆ ಉತ್ತಮ ಡಯಟ್ ಅನುಸರಿಸಬೇಕು. ಗ್ರೀನ್ ಟೀ, ಶುಂಠಿ, ಶೇ. 90ರಷ್ಟು ಡಾರ್ಕ್ ಚಾಕೊಲೇಟ್ ಇರುವ ಕೋಕೊ ನಿಬ್ಸ್, ದಪ್ಪ ಮೆಣಸಿನಕಾಯಿಯಂತಹ ಆಹಾರ ಸೇವಿಸಬೇಕು. ಇದರ ಜತೆಗೆ ದೇಹದ ತೂಕ, ಡಂಬಲ್ಸ್, ರೆಸಿಸ್ಟನ್ಸ್ ಬ್ಯಾಂಡ್, ಮಿನಿ ಬ್ಯಾಂಡ್, ಸ್ಟೆಬಿಲಿಟಿ ಬಾಲ್, ಕೆಟಲ್ ಬೆಲ್ಸ್‌ನಂತಹ ಸಾಧನಗಳನ್ನು ಉಪಯೋಗಿಸಿ ಸ್ಟ್ರೆಂತ್ ಟ್ರೇನಿಂಗ್ ಮಾಡುವುದರಿಂದ ಚಯಾಪಚಯ ಹೆಚ್ಚುತ್ತದೆ. ಸುಮ್ಮನೆ ಕೂತಿದ್ದರೂ ಚಯಾಪಚಯ ಕಾರ್ಯ ನಡೆಯುತ್ತಿರುತ್ತದೆ. ಇದು ಮಸಲ್ ಬಿಲ್ಡ್ ಮಾಡುತ್ತದೆ. ತೂಕವನ್ನು ಸಹ ಸುಲಭವಾಗಿ ಇಳಿಸಬಹುದು. ಕೂತಲ್ಲೇ ಕ್ಯಾಲೊರಿ ಬರ್ನ್ ಮಾಡಬೇಕೆಂದರೆ ನಮ್ಮ ದೇಹದಲ್ಲಿ ಮಾಂಸಖಂಡಗಳ ಅಗತ್ಯತೆ ಹೆಚ್ಚು. 30 ವರ್ಷಗಳ ನಂತರ ಸ್ನಾಯು ಸವೆಯುತ್ತಿರುತ್ತದೆ. ಹಾಗಾಗಿ ವರ್ಕೌಟ್ ಮಾಡುವ ಮೂಲಕ ಅದನ್ನು ಮರಳಿ ಪಡೆಯಬಹುದು. ಇದರಿಂದ ಮೆಟಬಾಲಿಸಂ ಹೆಚ್ಚುತ್ತದೆ. ■



ವನಿತಾ ಅಶೋಕ್ |
ಫಿಟ್ ಇಂಡಿಯಾ ರಾಯಭಾರಿ

Vijaya Karnataka pg.08

ಬೆಳೆ ಸಸ್ಯಗಳ ಜೀವಿತಾವಧಿ ಹೆಚ್ಚಿಸಬೇಕು

ಶಿವರಾಜ್ ಸಿಂಗ್ ಚೌಹಾಣ್ ಸಲಹೆ

■ ವಿಕ ಸುದ್ದಿಲೋಕ ಬೆಂಗಳೂರು

ರೈತರ ಆದಾಯ ಹೆಚ್ಚಿಸುವಂತಹ ಹೊಸ ಪ್ರಬೇಧದ ತಳಿಗಳು ಮತ್ತು ತಂತ್ರಜ್ಞಾನಗಳನ್ನು ಅವಿಷ್ಕರಿಸುವ ಅಗತ್ಯವಿದೆ. ಜತೆಗೆ, ಬೆಳೆಗಳ ಜೀವಿತಾವಧಿ ಹೆಚ್ಚಿಸಬೇಕು ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ವಿಜ್ಞಾನಿಗಳಿಗೆ ಸಲಹೆ ನೀಡಿದರು.

ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಗೆ ಭೇಟಿ ನೀಡಿ ಭಾನುವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ವಿಜ್ಞಾನಿಗಳೊಂದಿಗೆ ಚರ್ಚೆ ನಡೆಸಿದರು.

''ಸಣ್ಣ ರೈತರ ಆದಾಯ ಹೆಚ್ಚಿಸುವ ಏಕೈಕ ಮಾರ್ಗವೆಂದರೆ ಸಮಗ್ರ ಕೃಷಿ. ರೈತರು ಪಶುಸಂಗೋಪನೆ, ಮೀನುಗಾರಿಕೆ ಮತ್ತು ಜೇನು ಸಾಕಣೆಯೊಂದಿಗೆ ಸಮಗ್ರ ಕೃಷಿ ಮಾಡುವುದರಿಂದ ಹೆಚ್ಚಿನದನ್ನು ಗಳಿಸಬಹುದು,'' ಎಂದರು.

ಸಚಿವರು ಹಣ್ಣಿನ ಬೆಳೆಗಳ ಸರ್ವರಿ ಪ್ರದೇಶದಲ್ಲಿ 'ಅರ್ಕಾ ಉದಯ' ಹೆಸರಿನ ಮಾವಿನ ಸಸಿ ನೆಟ್ಟರು. ಐಐಎಚ್‌ಆರ್ ತಂತ್ರಜ್ಞಾನಗಳಿಂದ ಪ್ರಯೋಜನ ಪಡೆದ ರೈತರೊಂದಿಗೆ ಸಂವಾದ ನಡೆಸಿದರು. ಬಳಿಕ ಐಸಿಎಆರ್-ಐಐಎಚ್‌ಆರ್‌ನ ವಿಜ್ಞಾನಿಗಳೊಂದಿಗೆ ಸಂವಾದ ನಡೆಸಿದರು. ಐಸಿಎಆರ್-ಐಐಎಚ್‌ಆರ್ ನಿರ್ದೇಶಕ ಡಾ.ತುಷಾರ್ ಕಾಂತಿ ಬೆಹರಾ, ಐಐಎಚ್‌ಆರ್‌ನ ಪ್ರಧಾನ ವಿಜ್ಞಾನಿಗಳಾದ ಡಾ.ಕರುಣಾಕರನ್, ಡಾ. ಶಂಕರನ್, ಡಾ.ಪಿ.ನಂದೀಶ್ ಉಪಸ್ಥಿತರಿದ್ದರು.



Vijaya Karnataka pg.06

Vijaya Karnataka pg.03

ರಫ್ತು, ಮೂಲಸೌಕರ್ಯಗಳನ್ನು ವಿಸ್ತರಿಸಲು ಕೇಂದ್ರ ಸರಕಾರದ ನೆರವು ಬೇಕು: ಎನ್. ಚಲುವರಾಯಸ್ವಾಮಿ

ಕೇಂದ್ರ ಕೃಷಿ ಯೋಜನೆ ಜಾರಿಗೆ ಕರ್ನಾಟಕವೇ ಮಾದರಿ

■ ವಿಕ ಸುದ್ದಿಲೋಕ ಬೆಂಗಳೂರು

ಕೇಂದ್ರದ ಕೃಷಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಕರ್ನಾಟಕ ಮಾದರಿ ರಾಜ್ಯವಾಗಿದೆ. ಕೃಷಿ ಕ್ಷೇತ್ರದಲ್ಲಿ ರಫ್ತು ಮತ್ತು ಮೂಲಸೌಕರ್ಯಗಳನ್ನು ವಿಸ್ತರಿಸಲು ಕೇಂದ್ರ ಸರಕಾರದ ನೆರವು ಬೇಕಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದ್ದಾರೆ.

ಬೆಂಗಳೂರು ಅರಮನೆ ಆವರಣದಲ್ಲಿ ಕೃಷಿ ಇಲಾಖೆಯು ಆಯೋಜಿಸಿದ್ದ ಅಂತಾರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಮಾತನಾಡಿದರು. ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸಮ್ಮುಖದಲ್ಲಿ ನಡೆದ ಸಮ್ಮೇಳನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ''ರೈತರನ್ನು ಕೃಷಿ ಉದ್ಯಮಿಗಳಾಗಿ ರೂಪಿಸುವುದಕ್ಕೂ ಹಾಗೂ ದೇಶದ ಕೃಷಿ ಆರ್ಥಿಕತೆಯನ್ನು ಬಲಪಡಿಸುವುದಕ್ಕೂ ಕೇಂದ್ರ-ರಾಜ್ಯಗಳ ಸಮನ್ವಯ ಅತ್ಯಂತ ಅಗತ್ಯ. ಪ್ರಧಾನಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳ ಅಧಿಕೃತೀಕರಣ ಯೋಜನೆ ಸೇರಿದಂತೆ ಕೇಂದ್ರ ಯೋಜನೆಗಳಿಗೆ ಕರ್ನಾಟಕವು ಗಮನಾರ್ಹ ಸಾಧನೆ ಮಾಡಿದೆ. ಮುಂದಿನ ಹಂತದ ಆಹಾರ ಉದ್ಯಾನಗಳು, ಕೋಲ್ಡ್ ಸ್ಟೋರೇಜ್, ಸಾರಿಗೆ ವ್ಯವಸ್ಥೆ ಬ್ರಾಂಡಿಂಗ್ ಮತ್ತು ರಫ್ತು ಕ್ಷೇತ್ರಗಳಲ್ಲಿ ಹೆಚ್ಚುವರಿ ಕೇಂದ್ರ ನೆರವು ಅಗತ್ಯವಿದೆ,'' ಎಂದರು.

2024-25ರಲ್ಲಿ ಕರ್ನಾಟಕದ ಕಾಫಿ ರಫ್ತು ಮೌಲ್ಯ 1.1 ಬಿಲಿಯನ್ ಡಾಲರ್ ಆಗಿದೆ. 2023-24ರಲ್ಲಿ 173 ಮಿಲಿಯನ್ ಡಾಲರ್ ಮೌಲ್ಯದ ಮಾಲುಗಳು ರಫ್ತು ಆಗಿದೆ. ಕೃಷಿ ರಫ್ತಿನಲ್ಲಿ ಕರ್ನಾಟಕ ದೇಶದಲ್ಲಿ ಗುಜರಾತ್, ಮಹಾರಾಷ್ಟ್ರ ಮತ್ತು ತಮಿಳುನಾಡಿನ ನಂತರ ನಾಲ್ಕನೇ ಸ್ಥಾನದಲ್ಲಿದೆ. ಕರ್ನಾಟಕವು ದೇಶದ ಒಟ್ಟು ರೇಷ್ಮೆ ಉತ್ಪಾದನೆಯ ಸುಮಾರು 45 ಶೇಕಡಾ ಪಾಲಿನೊಂದಿಗೆ ವರ್ಷಕ್ಕೆ ಸುಮಾರು 9,000 ಟನ್ ರೇಷ್ಮೆ ಉತ್ಪಾದಿಸುತ್ತಿದೆ.

ಪಲ್ಸ್ ಮಿಷನ್ ಅಡಿ ಬೆಂಬಲ: ''ರೈತರಿಂದರೆ ನೆರವು ಅಗತ್ಯವಿದೆ,'' ಎಂದರು.



ಪ್ರತಿ ದಾಲ್‌ಮಿಲ್‌ಗೆ ಕೇಂದ್ರದಿಂದ 25 ಲಕ್ಷ ರೂ. ಅನುದಾನ

ಸಂಸ್ಕರಣಾ ಮೂಲಸೌಕರ್ಯದ ಅಗತ್ಯವನ್ನು ಉಲ್ಲೇಖಿಸಿದ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಕರ್ನಾಟಕದಲ್ಲಿ 35 ದಾಲ್ ಮಿಲ್‌ಗಳ ಸ್ಥಾಪನೆಗೆ ಬೆಂಬಲ ಘೋಷಿಸಿದರು. ಪ್ರತಿಯೊಂದು ಮಿಲ್‌ಗೆ ಕೇಂದ್ರದಿಂದ 25 ಲಕ್ಷ ರೂಪಾಯಿ ಅನುದಾನ ನೀಡಲು ನಿರ್ಧರಿಸಲಾಗಿದೆ. ತೆಂಗು ಬೆಳೆಯಲ್ಲಿ ಕರ್ನಾಟಕಕ್ಕೆ ವಿಶಿಷ್ಟ ಸ್ಥಾನವಿದ್ದರೂ ರಾಜ್ಯದಲ್ಲಿ ಇತ್ತೀಚೆಗೆ ಹಳೆಯ ತೋಟಗಳು ಮತ್ತು ರೋಗಗಳಿಂದ ಉತ್ಪಾದನೆ ಕುಂಠಿತಗೊಂಡಿದೆ. ಹೀಗಾಗಿ, ಹೊಸ ತಳಿಗಳನ್ನು ನೆಡುವ ಮೂಲಕ ಹಳೆಯ ತೋಟಗಳನ್ನು ಬದಲಿಸಲು ತೆಂಗು ಅಭಿವೃದ್ಧಿ ಯೋಜನೆ ಜಾರಿಗೊಳ್ಳಲಿದೆ ಹಾಗೂ ರೋಗ ನಿಯಂತ್ರಣಕ್ಕಾಗಿ ವೈಜ್ಞಾನಿಕ ತಂಡಗಳನ್ನು ರಚಿಸಲಾಗಿದೆ. ರಾಜ್ಯ ಸರಕಾರ ಸಕಾಲದಲ್ಲಿ ಪ್ರಸ್ತಾವನೆ ಕಳುಹಿಸಿ ಯೋಜನೆಯ ಪ್ರಯೋಜನ ಪಡೆಯಲಿ ಎಂದು ಹೇಳಿದರು.

ಉದ್ಯಮಿಗಳೊಂದಿಗೆ ಒಪ್ಪಂದ

95 ಎಫ್‌ಪಿಒಗಳು ಮತ್ತು ಎಂಎಸ್‌ಎಂಇ ಉದ್ಯಮಿಗಳು ಕಸ್ಟಮೈಸ್ ಮಾಡಿದ ಬ್ರಾಂಡಿಂಗ್ ಮತ್ತು ಪ್ಯಾಕೇಜಿಂಗ್ ಸೇವೆಗಳಿಗೆ ಪರಸ್ಪರ ನೋಂದಾಯಿಸಿಕೊಂಡರು. 115 ಎಫ್‌ಪಿಒಗಳು ಮತ್ತು ಎಂಎಸ್‌ಎಂಇ ಉದ್ಯಮಿಗಳು ರಫ್ತಿಗಾಗಿ ಫಾಲ್‌ಮಾರ್ಟ್ ಮತ್ತು ಫ್ಲಿಪ್‌ಕಾರ್ಟ್ ಸಂಸ್ಥೆಯೊಂದಿಗೆ ನೋಂದಾಯಿಸಿಕೊಂಡರು. 120ಕ್ಕೂ ಹೆಚ್ಚು ಎಫ್‌ಪಿಒಗಳು ಮತ್ತು ಎಂಎಸ್‌ಎಂಇ ಉದ್ಯಮಿಗಳು ಸಾಲ ಸೌಲಭ್ಯಕ್ಕಾಗಿ ಹಣಕಾಸು ಸಂಸ್ಥೆಗಳೊಂದಿಗೆ ನೋಂದಾಯಿಸಿಕೊಂಡರು.

ಈ ಬಾರಿಯ ಮೇಳದಲ್ಲಿ ಪಹಿವಾಟಿಗೆ ಒತ್ತು ನೀಡುವ ಬದಲು ಖರೀದಿದಾರರನ್ನು ಮಾರಾಟಗಾರರೊಂದಿಗೆ ಸಂಪರ್ಕಿಸುವುದು ನಮ್ಮ ಉದ್ದೇಶವಾಗಿತ್ತು.

-ಡಾ. ಜೆ.ಟಿ. ಪುತ್ರ
ನಿರ್ದೇಶಕ, ಕೃಷಿ ಇಲಾಖೆ

ರಾಜಕೀಯವನ್ನು ಮೀರಿ ಉನ್ನತ ಸ್ಥಾನದಲ್ಲಿರುವವರು. ಬಿಜೆಪಿ-ಕಾಂಗ್ರೆಸ್ ಎಂಬ ಬೇಧ ಭಾವ ರೈತನಿಗಿಲ್ಲ ಅದೇ ರೀತಿ ಕರ್ನಾಟಕದಲ್ಲಿ ಕೃಷಿ ಉತ್ಪನ್ನಗಳು ಕೇಂದ್ರ ಸರಕಾರ ಯಾವುದೇ ಬೇಧ ಭಾವವಿಲ್ಲದೆ ರಾಜ್ಯ ಸರಕಾರದೊಂದಿಗೆ ಹೆಗಲು ಕೊಟ್ಟು ಕೆಲಸ ಮಾಡಲು ಸಿದ್ಧವಿದೆ'' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಭರವಸೆ ನೀಡಿದರು.

■ ಆರಮನೆ ಆವರಣದಲ್ಲಿ ಕೃಷಿ ಇಲಾಖೆ ಆಯೋಜಿತ ಅಂತಾರಾಷ್ಟ್ರೀಯ ವಾಣಿಜ್ಯ ಮೇಳಕ್ಕೆ ಮೂರು ದಿನದಲ್ಲಿ 4 ಲಕ್ಷ ಮಂದಿ ಭೇಟಿ

''ತೊಗರಿ ಮತ್ತು ತೊಗರಿ ಬೇಳೆ ಉತ್ಪಾದನೆಯಲ್ಲಿ ಕರ್ನಾಟಕವು ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಆದರೆ, ಪ್ರತಿ ಹೆಕ್ಟೇರ್ ಉತ್ಪಾದನೆ ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಿದ್ದು, ಅದನ್ನು ಹೆಚ್ಚಿಸುವ ಅಗತ್ಯವಿದೆ. 'ಪಲ್ಸ್ ಮಿಷನ್' ನಡಿ ಉತ್ಪಾದಕತೆ ಹೆಚ್ಚಿಸಲು ಕೇಂದ್ರದಿಂದ ಸಂಪೂರ್ಣ ವೈಜ್ಞಾನಿಕ ಮತ್ತು ತಾಂತ್ರಿಕ ಬೆಂಬಲ ನೀಡಲಾಗುವುದು,'' ಎಂದು ಅಶ್ವಾಸನೆ ನೀಡಿದರು.

''ಬೆಳೆ ಮಿಷನ್ ಮತ್ತು ಗ್ರಾಮೀಣ ಮಿಷನ್ ನಡಿ ಕರ್ನಾಟಕಕ್ಕೆ 191.67 ಕೋಟಿ ರೂ. ಬಿಡುಗಡೆ ಮಾಡಲಾಗುತ್ತಿದೆ. ರಾಷ್ಟ್ರೀಯ ಕೃಷಿ ಅಭಿವೃದ್ಧಿ ಯೋಜನೆಯಡಿ ಬಾಕಿ ಇರುವ 154 ಕೋಟಿ ರೂಪಾಯಿಗಳನ್ನು ತಿಳಿಸಿ ಬಿಡುಗಡೆ ಮಾಡಲಾಗುತ್ತದೆ,'' ಎಂದು ಹೇಳಿದರು.

ಕಂದಾಯ ಸಚಿವ ಕೃಷ್ಣಬೈರೇಗೌಡ, ಕೃಷಿ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ. ಎಸ್. ಸೆಲ್ವಕುಮಾರ್, ಆಯುಕ್ತರಾದ ವೈ.ಎಸ್. ಪಾಟೀಲ್, ನಿರ್ದೇಶಕ ಡಾ. ಜೆ.ಟಿ. ಪುತ್ರ ಉಪಸ್ಥಿತರಿದ್ದರು.

ಕೃಷಿ ಯೋಜನೆಯಲ್ಲಿ ರಾಜ್ಯ ಮಾದರಿ: ಚಲುವ

ಕೃಷಿ ರಫ್ತು ಮೂಲಸೌಕರ್ಯ ವಿಸ್ತರಣೆ ಅತ್ಯಗತ್ಯ: ಸಚಿವ | ವಾಣಿಜ್ಯ ಮೇಳ ಸಮಾರೋಪ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಕೇಂದ್ರಸರ್ಕಾರದಕೃಷಿಯೋಜನೆಗಳನ್ನುಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಕರ್ನಾಟಕ ಮಾದರಿ ರಾಜ್ಯವಾಗಿ ಹೊರಹೊಮ್ಮಿದೆ. ಆದ್ದರಿಂದ ಕೃಷಿ ಕ್ಷೇತ್ರದಲ್ಲಿ ರಫ್ತು ಮತ್ತು ಮೂಲಸೌಕರ್ಯಗಳನ್ನು ವಿಸ್ತರಿಸಲು ಕೇಂದ್ರ ಸರ್ಕಾರ ಹೆಚ್ಚಿನ ಬೆಂಬಲ ನೀಡುವ ಅಗತ್ಯವಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

ಅಂತಾರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪದಲ್ಲಿ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರ ಸಮ್ಮುಖದಲ್ಲಿ ಮಾತನಾಡಿದರು. ಪಿಎಂ ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳ ಅಧಿಕೃತೀಕರಣ ಯೋಜನೆ(ಪಿಎಂಎಫ್‌ಎಂಇ) ಸೇರಿ ಕೇಂದ್ರ ಯೋಜನೆಗಳಡಿ ಕರ್ನಾಟಕ ಗಮನಾರ್ಹ ಸಾಧನೆ ಮಾಡಿದೆ. ಮುಂದಿನ ಹಂತದ ಆಭಿವೃದ್ಧಿಗೆ ಆಹಾರ ಪಾರ್ಕ್, ಕೋಲ್ಡ್ ಸ್ಟೋರೇಜ್, ಸಾರಿಗೆ ವ್ಯವಸ್ಥೆ ಬ್ರ್ಯಾಂ ಡಿಂಗ್ ಮತ್ತು ರಫ್ತು ಕ್ಷೇತ್ರಗಳಲ್ಲಿ ಹೆಚ್ಚುವರಿಯಾಗಿ ಕೇಂದ್ರದ ನೆರವಿನ ಅಗತ್ಯವಿದೆ. ರೈತರನ್ನು ಕೃಷಿ ಉದ್ಯಮಿಗಳಾಗಿ ರೂಪಿ ಸಲು, ದೇಶದ ಕೃಷಿ ಆರ್ಥಿಕತೆ ಬಲಪಡಿಸಲು ಕೇಂದ್ರ-ರಾಜ್ಯ ಗಳ ಸಮನ್ವಯ ಅತ್ಯಂತ ಅಗತ್ಯವಿದೆ ಎಂದು ಹೇಳಿದರು.

ಕರ್ನಾಟಕದ 25ಕ್ಕೂ ಅಧಿಕ ಕೃಷಿ ಉತ್ಪನ್ನಗಳಿಗೆ ಭೌಗೋಳಿಕ ಸೂಚ್ಯಂಕ(ಜಿಐ) ಮಾನ್ಯತೆ ದೊರೆತಿದೆ. ಕಲಬುರಗಿ ಜಿಲ್ಲೆಯಲ್ಲಿ ಉತ್ಪಾದನೆಯಾಗುವ ತೊಗರಿ ಬೇಳೆಗೆ 'ಭೀಮಾ ಪಲ್' ಬ್ರಾಂಡ್ ಮತ್ತು ತೋಟಗಾರಿಕಾ ಇಲಾಖೆಯ 'ಜೆಂಕರ್' ಜೇನು ಬ್ರ್ಯಾಂಡಿಂಗ್ ಇದಕ್ಕೆ ಉದಾಹರಣೆಗಳಾಗಿವೆ. 2022- 23ರಲ್ಲಿ ಕರ್ನಾಟಕವು ₹36 ಕೋಟಿ ಮೌಲ್ಯದ ಸುಮಾರು 8 ಸಾವಿರ ಟನ್ ಸಿರಿಧಾನ್ಯ ಮತ್ತು ಸಿರಿಧಾನ್ಯದ ಉತ್ಪನ್ನಗಳನ್ನು ರಫ್ತು ಮಾಡಿದೆ. ಇದು ದೇಶದ ಒಟ್ಟು ಸಿರಿಧಾನ್ಯ ರಫ್ತಿನ ಸುಮಾರು ಶೇ.40 ಆಗಿದೆ ಎಂದು ಸಚಿವರು ವಿವರಿಸಿದರು.



ಪಿಎಂಎಫ್‌ಎಂಇಯಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ

ಪ್ರಧಾನಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಘಟಕಗಳ ಅಧಿಕೃತೀಕರಣ ಯೋಜನೆ (ಪಿಎಂಎಫ್‌ಎಂಇ) ಜಾರಿಯಲ್ಲಿ ಕರ್ನಾಟಕ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಈ ಯೋಜನೆಗೆ ಕೃಷಿ ಇಲಾಖೆ ನೋಡಲ್ ಇಲಾಖೆಯಾಗಿದ್ದು, ಕೆವಿಕ್ ನೋಡಲ್ ಏಜೆನ್ಸಿಯಾಗಿದೆ. ಮೈಸೂರಿನ ಸಿಎಫ್‌ಟಿಆರ್‌ಐ ತಂತ್ರಜ್ಞಾನ ಸಹಭಾಗಿಯಾಗಿ ಕಾರ್ಯನಿರ್ವಹಿಸುತ್ತಿದೆ. ಯೋಜನೆಯಡಿ 500ಕ್ಕೂ ಅಧಿಕ ರೈತರಿಗೆ ಕೃಷಿ ಉದ್ಯಮಿಗಳಾಗಿ ತರಬೇತಿ ನೀಡಲಾಗಿದೆ. 2020-21ರಿಂದ ಈವರೆಗೆ 8,800 ಫಲಾನುಭವಿಗಳಿಗೆ ₹1,075 ಕೋಟಿ ಸಾಲ ಮಂಜೂರಾಗಿದ್ದು, ಇದು ದೇಶದಲ್ಲೇ ಅತಿ ಹೆಚ್ಚು ಎಂದು ಚಲುವರಾಯಸ್ವಾಮಿ ಮೆಚ್ಚುಗೆ ವ್ಯಕ್ತಪಡಿಸಿದರು.

Kannadaprabha pg.05

ದ್ವಿದಳ ಧಾನ್ಯ ಅಭಿವೃದ್ಧಿಗೆ ₹191 ಕೋಟಿ: ಚೌಹಾಣ್

ಅಂತಾರಾಷ್ಟ್ರೀಯ ವಾಣಿಜ್ಯ ಮೇಳದಲ್ಲಿ ಕೇಂದ್ರ ಸಚಿವ ಘೋಷಣೆ | ಸರ್ಕಾರಕ್ಕೆ ಅನುಮೋದನಾ ಪತ್ರ ಹಸ್ತಾಂತರಿಸಿದ ಸಚಿವ

• ಕನ್ನಡಪ್ರಭ ವಾರ್ತೆ ಬೆಂಗಳೂರು

ದ್ವಿದಳ ಧಾನ್ಯ ಮಿಷನ್ ಅಡಿ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ₹191.67 ಕೋಟಿ ಅನುದಾನ ಬಿಡುಗಡೆ ಮಾಡುತ್ತಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಘೋಷಿಸಿದ್ದಾರೆ.

ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪ ಸಮಾರಂಭದಲ್ಲಿ ಅನುಮೋದನಾ ಪತ್ರ ಹಸ್ತಾಂತರಿಸಿ ಮಾತನಾಡಿ, ಕೇಂದ್ರ ಸರ್ಕಾರವು ಆತ್ಮನಿರ್ಭರ ಭಾರತ್ ಅಡಿ ದ್ವಿದಳ ಧಾನ್ಯ ಮಿಷನ್‌ನಿಂದ ರಾಜ್ಯಕ್ಕೆ ₹191.67 ಕೋಟಿ ಅನುದಾನ ನೀಡಿದ್ದು, ಇದನ್ನು ದ್ವಿದಳ ಧಾನ್ಯಗಳ ಉತ್ಪಾದನೆ, ಮೌಲ್ಯವರ್ಧನೆ ಮತ್ತಿತರ ಕಾರ್ಯಗಳಿಗೆ ಬಳಸಿಕೊಳ್ಳಬೇಕು. ರಾಷ್ಟ್ರೀಯ ಕೃಷಿ ಅಭಿವೃದ್ಧಿ ಯೋಜನೆಯಡಿ ಬಾಕಿ ಇರುವ ₹154 ಕೋಟಿ ಶೀಘ್ರವಾದಲ್ಲೇ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ದೇಸಿ ಬೀಜ ಸಂರಕ್ಷಣೆ, ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆಗೆ ಸೇರಿ ಕರ್ನಾಟಕದಲ್ಲಿ ಕೃಷಿ ಬಲವಡಿಸಲು ಕೇಂದ್ರ ಸರ್ಕಾರ ಯಾವುದೇ ಭೇದ ಭಾವವಿಲ್ಲದೆ ರಾಜ್ಯ ಸರ್ಕಾರದೊಂದಿಗೆ ಹೆಗಲಿಗೆ ಹೆಗಲು ಸೇರಿಸಿ ಕೆಲಸ ಮಾಡಲಿದೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ಬಿಜೆಪಿ ಅಥವಾ ಕಾಂಗ್ರೆಸ್ ಸರ್ಕಾರ ಎಂದು ತಾರತಮ್ಯ ಮಾಡುವುದಿಲ್ಲ. ಕರ್ನಾಟಕಕ್ಕೆ ನೆರವು ನೀಡಲಾಗುವುದೆಂದು ಸ್ಪಷ್ಟಪಡಿಸಿದರು.

ಮಾವು, ಮೀನಸಿನಕಾಯಿ ಮತ್ತು ತೊಗರಿ ಬಿರೀದಿ ಸೇರಿ ಕರ್ನಾಟಕ ಕೃಷಿ ಸಚಿವರು ಕಳುಹಿಸಿದ ಪ್ರಸ್ತಾವನೆಗಳಿಗೆ ಕೇಂದ್ರ ಯಾವತ್ತೂ ನಿರಾಕರಿಸಿಲ್ಲ, ರಾಜ್ಯದ ಕಾಫಿ ವಿಶ್ವಕ್ಕೆ ಶಕ್ತಿ ನೀಡುತ್ತದೆ, ಚಿಂದನ ತಾಜಾತನ ನೀಡುತ್ತದೆ, ರೇಷ್ಮೆ ಜಾಗತಿಕ ಮಾನ್ಯತೆ ತಂದುಕೊಡುತ್ತದೆ, ತೆಂಗು ಆರೋಗ್ಯ ಮತ್ತು ರುಚಿ ನೀಡುತ್ತದೆ. ಭತ್ತ, ಸಿರಿಧಾನ್ಯಗಳು ವಿಶ್ವ ಮಟ್ಟದಲ್ಲಿ ಪೌಷ್ಟಿಕತೆ ಮತ್ತು ಆರೋಗ್ಯಕ್ಕೆ ಸಹಕಾರಿ ಎಂದು ಬಣ್ಣಿಸಿದರು.

ತೊಗರಿ ಇಳುವರಿ ಹೆಚ್ಚಳ ಅಗತ್ಯ: ಬರೀ ಉತ್ಪಾದನೆ ಮಾಡಿದರಷ್ಟೇ ಸಾಕಾಗುವುದಿಲ್ಲ, ಮೌಲ್ಯವರ್ಧನೆ, ಸಂಸ್ಕರಣೆ ಮತ್ತು ಮಾರುಕಟ್ಟೆ ವ್ಯವಸ್ಥೆಗಳ ಅಗತ್ಯವಿದೆ ಎಂದರು.

ಕೃಷಿಯಲ್ಲಿ ಬೀಜಗಳ ಪಾತ್ರ ಮಹತ್ವದ್ದಾಗಿದ್ದು, 25 ಬೀಜ ಗ್ರಾಮ ಸ್ಥಾಪಿಸಲು ಕೇಂದ್ರ ಸಹಕಾರ ನೀಡಲಿದೆ. ರಾಜ್ಯದಲ್ಲಿ ತಲಾ ₹25 ಲಕ್ಷ ವೆಚ್ಚದಲ್ಲಿ 35 ಬೀಜೋತ್ಪಾದನಾ ಯಂತ್ರ ಸ್ಥಾಪನೆಗೆ ಅನುದಾನ ನೀಡಲಾಗುವುದು. ರಾಜ್ಯದಲ್ಲಿ ಹಳೆಯ ಮತ್ತು ರೋಗಬಾಧೆಗೆ ಒಳಗಾದ ತೆಂಗಿನ ಸಸಿಗಳಿಗೆ ತೆಂಗು ಅಭಿವೃದ್ಧಿ ಯೋಜನೆ ಮೂಲಕ ನೆರವು ನೀಡಲಾಗುವುದು. ಯೋಜನೆಯ ಪೂರ್ಣ ಪ್ರಯೋಜನ ಪಡೆಯಲು ರಾಜ್ಯವು ಪ್ರಸ್ತಾವನೆ ಸಲ್ಲಿಸಬೇಕು ಎಂದು ಸೂಚಿಸಿದರು.

ಸಿರಿಧಾನ್ಯಕ್ಕೆ ಅಂತಾರಾಷ್ಟ್ರೀಯ ಮಾರುಕಟ್ಟೆ: ಕೇಂದ್ರ ಸರ್ಕಾರವು ಗೋಡಂಬಿ, ಕಾಫಿ ಮತ್ತು ಕೋಕೋ ಬೆಳೆಗಳಿಗೆ ಉತ್ತೇಜನ ನೀಡಲು ಹೊಸ ಯೋಜನೆಗಳನ್ನು ರೂಪಿಸುತ್ತಿದೆ. ಟೊಮೆಟೋ, ಮೆಣಸಿನಕಾಯಿ, ಮಾವು, ಡ್ರ್ಯಾಗನ್ ಫ್ರೂಟ್ ಸೇರಿ ತೋಟಗಾರಿಕಾ ಕ್ಷೇತ್ರದಲ್ಲಿ ರಾಜ್ಯ ಉತ್ತಮ ಪ್ರಗತಿ ಸಾಧಿಸಿದೆ. ಸಿರಿಧಾನ್ಯ ಮತ್ತು ಸಂಸ್ಕರಿತ ಉತ್ಪನ್ನಗಳಿಗೆ ದೇಶೀಯ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆ ಕಲ್ಪಿಸಲಾಗುವುದು. ರೈತರಿಂದ ಪ್ರತಿ ಹೆಕ್ಟೇರ್‌ಗೆ ₹10000 ಪ್ರೋತ್ಸಾಹಧನ ನೀಡಲಾಗುತ್ತದೆ ಎಂದು ಭರವಸೆ ನೀಡಿದರು.



ದ್ವಿದಳ ಧಾನ್ಯ ಮಿಷನ್ ಅಡಿ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ₹191.67 ಕೋಟಿ ಅನುದಾನ ಬಿಡುಗಡೆ ಮಾಡುವ ಅನುಮೋದನಾ ಪತ್ರವನ್ನು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಬೆಂಗಳೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪದಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಅವರಿಗೆ ಹಸ್ತಾಂತರಿಸಿದರು. ಕಂದಾಯ ಸಚಿವ ಕೃಷ್ಣ ಬೈರೇಗೌಡ, ಸಂಸದ ಲೆಹರ್ ಸಿಂಗ್ ಅವರು ಹಾಜರಿದ್ದರು.

Kannadaprabha pg.05

ಬ್ಯಾಡಗಿ ಮೆಣಸಿನಕಾಯಿ ಶೇ.50ರಷ್ಟು ಬೆಳೆ ಕುಸಿತ | ಮಾರುಕಟ್ಟೆಗೆ ಆವಕ ಕೂಡ 50ರಷ್ಟು ಕಡಿಮೆ | ಈ ವರ್ಷ ಡಬ್ಬಿ ಮೆಣಸಿನಕಾಯಿ ಕೆಜಿಗೆ 600 ರು.

ಮೆಣಸಿನಕಾಯಿ ಬೆಳೆಗಾರರಿಗೆ ಸಿಹಿ, ಗ್ರಾಹಕರ ಬಾಯಿ ಕಾರ

ಎ ಹೂವಪ್ಪ ಐ.ಎಚ್. ಬೆಂಗಳೂರು

ವಿಷ್ಯಾದಲ್ಲಿಯೇ ಅತಿಹೆಚ್ಚು ವಹಿವಾಟು ನಡೆಸುವ ಮೆಣಸಿನಕಾಯಿ ಮಾರುಕಟ್ಟೆಯಲ್ಲಿ ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯೂ ಒಂದು.

ಸತತ 2 ವರ್ಷಗಳಿಂದ ಬೆಲೆ ಕುಸಿತದಿಂದ ತತ್ತರಿಸಿದ್ದ ಮೆಣಸಿನಕಾಯಿ ರೈತರಿಗೆ ಈ ವರ್ಷದ ಆರಂಭದಲ್ಲಿಯೇ ಉತ್ತಮ ದರ ದೊರೆಯುತ್ತಿರುವುದು ಮೆಣಸಿನಕಾಯಿ ಬೆಳೆಗಾರರ ಬಾಯಿ ಸಿಹಿಯಾಗಿದೆ. ಆದರೆ ಕೀವ್ಲ ಬೆಲೆ ಏರಿಕೆಯಿಂದ ಗ್ರಾಹಕರ ಬಾಯಿ ಭಾರೀ ಖಾರವಾಗಿದೆ. ಕಳೆದ ವರ್ಷ ರಾಜ್ಯದಲ್ಲಿ ಮೆಣಸಿನಕಾಯಿ ಬೆಳೆ ಇಳುವರಿ ಹೆಚ್ಚಿತ್ತು. ಜತೆಗೆ ಹಳೇ ದಾಸ್ತಾನು ಕೂಡ ಇದ್ದ ಪರಿಣಾಮ ಬ್ಯಾಡಗಿ ಮಾರುಕಟ್ಟೆಗೆ ಭಾರೀ ಪ್ರಮಾಣದಲ್ಲಿ ಆವಕವಾಗಿ ಬೆಲೆ ಭಾರೀ ಇಳಿಕೆಯಾಗಿ ಗ್ರಾಹಕರಿಗೆ ಖುಷಿ ಕೊಟ್ಟಿತ್ತು. ಕಳೆದ ವರ್ಷ ಗ್ರಾಹಕರು ಕೆಜಿಗೆ ಬ್ಯಾಡಗಿ ಉತ್ತಮ ಮೆಣಸಿನಕಾಯಿ 300–350 ರು. ಗೆ ಖರೀದಿಸಿದ್ದರು. ಈ ವರ್ಷ 600–650 ರು. ಗೆ ಖರೀದಿ ಮಾಡಬೇಕಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಡಬ್ಬಿ ಮತ್ತು ಕಡ್ಡಿ ಮೆಣಸಿನಕಾಯಿ ಈ ವರ್ಷ ದುಪ್ಪಟ್ಟು ಬೆಲೆ ಏರಿಕೆಯಾಗಿದೆ. ಇತರೆ ವೆರಿಟಿ ಶೇ.70ರಷ್ಟು ಏರಿಕೆಯಾಗಿದೆ.

ಬ್ಯಾಡಗಿ ಕಡ್ಡಿ ಮೆಣಸಿನಕಾಯಿ ದರ ಕಳೆದ ಸಾಲಿನಲ್ಲಿ ಕ್ವಿಂಟಲ್‌ಗೆ ಕನಿಷ್ಠ 8,000–9,000 ರು. ಹಾಗೂ ಗರಿಷ್ಠ 12,000–13,000 ರು. ಇತ್ತು. ಡಬ್ಬಿ ಮೆಣಸಿನಕಾಯಿಗೆ ಕನಿಷ್ಠ 3,000–3,500, ರು. ಗರಿಷ್ಠ 4,000–5,000 ರು. ಇತ್ತು. ಗುಂಟೂರು ಮೆಣಸಿನಕಾಯಿ ಕ್ವಿಂಟಲ್‌ಗೆ ಕನಿಷ್ಠ 9,000 ಹಾಗೂ ಗರಿಷ್ಠ 16,409 ರು.ಗೆ ಮಾರಾಟವಾಗಿತ್ತು. ಪ್ರಸಕ್ತ ವರ್ಷ ಬ್ಯಾಡಗಿ ಮಾರುಕಟ್ಟೆಗೆ ಹೆಚ್ಚು ಕಡಿಮೆ ದಿನನಿತ್ಯ 50–60 ಸಾವಿರ ಚೀಲಗಳಷ್ಟು ಪೂರೈಕೆಯಾಗುತ್ತಿದ್ದು, ಉತ್ತಮ ಡಬ್ಬಿ ಮೆಣಸಿನಕಾಯಿ ಪ್ರಸ್ತುತ ದರ ಕ್ವಿಂಟಲ್‌ಗೆ ಗರಿಷ್ಠ ದರ 75,500 ರು. ಕನಿಷ್ಠ 50,500 ರು. ಗೆ ಮಾರಾಟವಾಗಿದೆ. ಕಡ್ಡಿ ಮೆಣಸಿನಕಾಯಿ ಗರಿಷ್ಠ 62,000 ರು. ಕನಿಷ್ಠ 43,000 ರು. ಗೆ ಮಾರಾಟವಾಗಿದೆ. ಇನ್ನೂ ಗುಂಟೂರು, ಮೆಣಸಿನಕಾಯಿ ಕ್ವಿಂಟಲ್‌ಗೆ 14,000 ರು. ನಿಂದ 18,000 ರು.ವರೆಗೆ ಮಹಿವಾಟಾಗಿದೆ. ಇನ್ನು ಬೆಂಗಳೂರು, ಮಾರುಕಟ್ಟೆಯಲ್ಲಿ ಬ್ಯಾಡಗಿ ಡಬ್ಬಿ ಕನಿಷ್ಠ 35,000 ರಿಂದ ಗರಿಷ್ಠ 78,000 ರು.ಗೆ, ಗುಂಟೂರು ಮೆಣಸಿನಕಾಯಿ 25,000–35,000 ರು. ಗೆ ಮಾರಾಟವಾಗಿದೆ.

ಈ ವರ್ಷ ಬೆಳೆ ಕಡಿಮೆ: ಕಳೆದ ಎರಡು ವರ್ಷ ಮಳೆರಾಯನ ಆರ್ಭಟ ಮೆಣಸಿನಕಾಯಿ ಬೆಳೆಗಾರರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಮೆಣಸಿನಕಾಯಿ ಗಿಡಕ್ಕೆ ಹಾನಿ ತಂದಿದ್ದಲ್ಲದೇ, ಸಂಕರ ಡಿಸೆಂಬರ್‌ನಲ್ಲಿ ಮೆಣಸಿನಕಾಯಿ ಒಣಗಲು ಹಾಕಿದಾಗ ಸಹ ಮಳೆರಾಯ ಆರ್ಭಟಿಸಿದ್ದು, ಗುಣಮಟ್ಟದ ಬೆಳೆ ಹೆಚ್ಚು ಪ್ರಮಾಣದಲ್ಲಿ ಸಿಗಲಿಲ್ಲ, ಅಲ್ಪದೇ ಸತತ ಎರಡು ವರ್ಷ ಅಧಿಕ ಲಾಭದ ಆಸೆಗೆ ರೈತರು ಹೆಚ್ಚಿಗೆ ಬೆಳೆ ಮಾಡಿದ್ದರು. ಇದರಿಂದ ಕಳೆದ ಸಾಲಿನಲ್ಲಿ ಮಾರುಕಟ್ಟೆಗೆ ಪೂರೈಕೆ ಅಧಿಕವಾಯಿತು, ದರ ಕಡಿಮೆಯಾಯಿತು. ಆದರೆ ಸತತ ಎರಡು ವರ್ಷಗಳಿಂದ ಮೆಣಸಿನಕಾಯಿ ಬೆಳೆಯಲ್ಲಿ ಅಲ್ಪಲಾಭ ಮತ್ತು ಹಾನಿ ಅನುಭವಿಸಿದ್ದ ರೈತರು ಈ ವರ್ಷ ಕಡಿಮೆ ವಿಸ್ತೀರ್ಣದಲ್ಲಿ ಮೆಣಸಿನಕಾಯಿ ಬೆಳೆ ಹಾಕಿದ್ದಾರೆ ಎಂದು ಹೇಳಲಾಗುತ್ತಿದೆ.

ಕಳೆದ ವರ್ಷ ಆವಕ ಹೆಚ್ಚು, ಬೆಲೆ ಕಡಿಮೆ: ಮಾರುಕಟ್ಟೆ ಕಳೆದ ವರ್ಷ ಇತಿಹಾಸದಲ್ಲಿ ಕಾಣದಷ್ಟು ಮೆಣಸಿನಕಾಯಿ ವಹಿವಾಟು ನಡೆಸಿತ್ತು. ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ಚೀಲ ಹಿಡಿಯಲಾರದಷ್ಟು ಆವಕವಾಗಿತ್ತು. ಮಾರುಕಟ್ಟೆಯ ಪ್ಯಾಂಗಣದಲ್ಲಿ ಅಷ್ಟೇ ಅಲ್ಲದೆ ತಾಲೂಕು ಕ್ರೀಡಾಂಗಣದಲ್ಲಿ ಸಹ ಮೆಣಸಿನಕಾಯಿ ಚೀಲವಿಟ್ಟು ಟೆಂಡರ್ ಹಾಕಲಾಗಿತ್ತು. ಸುಮಾರು ಅಂದಾಜು 3 ಲಕ್ಷ 20 ಸಾವಿರ ಮೆಣಸಿನಕಾಯಿ ಚೀಲಗಳು ಕಳೆದ ವರ್ಷದ ಸೀಸನ್‌ನಲ್ಲಿ ಆವಕವಾಗಿತ್ತು. ಅಧಿಕ ಲಾಭ ಸಿಗುವ ಭರವಸೆಯಿಟ್ಟುಕೊಂಡ ರೈತರು ಹೆಚ್ಚಿನ ವಿಸ್ತೀರ್ಣದಲ್ಲಿ ಬೆಳೆ ಬೆಳೆದಿದ್ದರು. ಅಧಿಕ ಇಳುವರಿಯ ಜತೆಗೆ ಮಳೆಯ ಚೆಲ್ಲಾಟದಲ್ಲಿ ಮೆಣಸಿನಕಾಯಿ ದರದಲ್ಲಿ ಕುಸಿತ ತಂದಿತ್ತು. ರೈತರು ಲಾಭ ಇರಲಿ, ಬೆಳೆಗೆ ಮಾಡಿದ ಖರ್ಚು ಸಿಗಲಾರದಷ್ಟು ಬೆಲೆ ಕುಸಿದಿತ್ತು ಎನ್ನುತ್ತಾರೆ ರೈತರು.

ಈ ವರ್ಷ ಲೋಕಲ್ ಮೆಣಸಿನಕಾಯಿ ಕಮ್ಮಿ: ರೋಗ ಬಾಧೆ ಸೇರಿದಂತೆ ನಾನಾ ಕಾರಣಗಳಿಂದ ಮೆಣಸಿನಕಾಯಿ ಬೆಳೆ ಕ್ಷೇತ್ರ ಕಡಿಮೆಯಾಗಿದ್ದು, ಮಾರುಕಟ್ಟೆಗೆ ಆವಕ ಕಡಿಮೆಯಾಗಿದೆ. ಬೇರೆ ರಾಜ್ಯದಿಂದ ಬರುವ ಸೀಡ್ ವೆರೈಟಿ ಮೆಣಸಿನಕಾಯಿ ಆವಕದಲ್ಲಿ ಕೊರತೆ ಒಂದೆಡೆಯಾದರೆ ಮತ್ತೊಂದೆಡೆ ರಾಜ್ಯದಲ್ಲಿನ ಕುಂದಗೋಳ, ಆಣ್ಣಿಗೇರಿ, ಅಂತೂರ, ಬೆಂತೂರ, ಗದಗ, ಸಂಶಿ, ಸುತ್ತಲ ಪ್ರದೇಶದಲ್ಲಿ ಬೆಳೆಯುತ್ತಿದ್ದ ಲೋಕಲ್ ಮೆಣಸಿನಕಾಯಿ ಬೆಳೆ ಕಮ್ಮಿಯಾಗಿದೆ. ಈಗ ಉತ್ತಮ ಬೆಲೆ ಸಿಗುತ್ತಿರುವುದಕ್ಕೆ ಇದು ಕೂಡ ಕಾರಣವಾಗಿದೆ.



ಎಷ್ಟು ಉತ್ಪಾದನೆ?

2024–25ರಲ್ಲಿ ಮೆಣಸಿನಕಾಯಿ ಬೆಳೆಯ ಪ್ರದೇಶ ಸುಮಾರು 1.24 ಲಕ್ಷ ಹೆಕ್ಟೇರ್ ಪ್ರದೇಶವಾಗಿದ್ದು ಸುಮಾರು 2.19 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿತ್ತು.
2025–26ರಲ್ಲಿ ಸುಮಾರು 79,152 ಹೆಕ್ಟೇರ್ ನಲ್ಲಿ ಬೆಳೆಯಲಾಗಿದ್ದು, ಸುಮಾರು 1.58 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಆಗಿದೆ.

ಈ ವರ್ಷ ಮೆಣಸಿನಕಾಯಿ ಬೆಳೆ ಕಡಿಮೆ ಇರುವುದರಿಂದ ಬ್ಯಾಡಗಿ ಮಾರುಕಟ್ಟೆಗೆ ಆವಕ ಕಡಿಮೆ ಇದೆ. ಇದರ ಪರಿಣಾಮ ಬೇಡಿಕೆ ಹೆಚ್ಚಾಗಿ ಬೆಲೆ ಏರಿಕೆಯಾಗಿದೆ.
– ಬಿ.ಎಸ್.ಗೌಡರ
ಬ್ಯಾಡಗಿ ಎಪಿಎಂಸಿ ಸಹಾಯಕ ಕಾರ್ಯದರ್ಶಿ

ಮೆಣಸಿನಕಾಯಿ ಬೆಲೆ ಭಾರೀ ಏರಿಕೆ ಕಂಡಿದೆ. ಬ್ಯಾಡಗಿ ಡಬ್ಬಿ ಮತ್ತು ಕಡ್ಡಿ ತಳಿ ಕಳೆದ ವರ್ಷಕ್ಕಿಂತ ಈ ವರ್ಷ ಬೆಲೆ ದುಪ್ಪಟ್ಟಾಗಿದೆ. ಇತರೆ ತಳಿ ಮೆಣಸಿನಕಾಯಿ ಬೆಲೆ ಶೇ.70–80ರಷ್ಟು ಏರಿಕೆಯಾಗಿದೆ. ಈ ತೀವ್ರ ಬೆಲೆ ಏರಿಕೆಯಾಗಿದ್ದರಿಂದ ವ್ಯಾಪಾರ ಸ್ವಲ್ಪ ಮಂದಗತಿ ಇದೆ.
– ಪಿ.ಸಿ.ಎನ್.ಪ್ರಭಾಕರ
ಬೆಂಗಳೂರು ಎಪಿಎಂಸಿ ಮೆಣಸಿನಕಾಯಿ ವರ್ತಕ

Vishwavani pg.09

'ಕೃಷಿ ಕ್ಷೇತ್ರ: ರಾಜ್ಯಕ್ಕೆ ಕೇಂದ್ರದ ಬೆಂಬಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿವಿಧ ಬೆಳೆಗಳ ವಿಚಾರದಲ್ಲಿ ಕರ್ನಾಟಕವು ದೇಶದಲ್ಲಿಯೇ ಮೊದಲ ಸ್ಥಾನ ಕಾಯ್ದುಕೊಂಡಿದೆ. ರಾಜ್ಯದಲ್ಲಿ ಕೃಷಿ ವಲಯವನ್ನು ಇನ್ನಷ್ಟು ಅಭಿವೃದ್ಧಿಪಡಿಸುವಲ್ಲಿ ಮೌಲ್ಯವರ್ಧನೆಗೆ ಒತ್ತು ನೀಡಬೇಕಿದ್ದು, ಕೇಂದ್ರ ಸರ್ಕಾರವು ಅದಕ್ಕೆ ಬೆಂಬಲ ನೀಡಲಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು.

ಕೃಷಿ ಇಲಾಖೆಯು ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಉತ್ಪಾದನೋತ್ತರ ಕೃಷಿ ಪರಿಕಲ್ಪನೆಯ 'ಅಂತರರಾಷ್ಟ್ರೀಯ ವಾಣಿಜ್ಯ ಮೇಳ'ದಲ್ಲಿ ಅವರು ಮಾತನಾಡಿದರು.

'ಕರ್ನಾಟಕದಲ್ಲಿ ಅರಂಭವಾದ ಸಿರಿಧಾನ್ಯ ಪರಿಕಲ್ಪನೆ ಈಗ ಇಡೀ ದೇಶಕ್ಕೆ ವ್ಯಾಪಿಸಿದೆ. ಜಿಲ್ಲಾ ಕಾಫಿ, ತೆಂಗು, ಕೋಕೋ ಮತ್ತಿತರ ಬೆಳೆಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಇದೆ. ಆದರೆ ರಾಜ್ಯದ ಉತ್ತರ ಭಾಗದಲ್ಲಿ ತೊಗರಿಯನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಿತ್ತಿದ್ದು, ಮೌಲ್ಯವರ್ಧನೆಯ ಕೊರತೆ ಇದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮತ್ತು ರೈತರು ಯೋಚನೆ ಮಾಡಬೇಕು. ನಿಮ್ಮೊಂದಿಗೆ ನಾವು ನಿಲ್ಲುತ್ತೇವೆ' ಎಂದರು.

> **ರೈತರನ್ನು ಕೃಷಿ ಉದ್ಯಮಿಗಳನ್ನಾಗಿಸಲು ಮತ್ತು ಕೃಷಿ ಆರ್ಥಿಕತೆಯನ್ನು ಬಲವಡಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಸಮನ್ವಯದ ಅತ್ಯಗತ್ಯ**
> **ಚಲುವರಾಯಸ್ವಾಮಿ,** ಕೃಷಿ ಸಚಿವ

> **ರೈತರ ವಿಚಾರದಲ್ಲಿ ನಾವು ರಾಜಕೀಯ ಮಾಡುವುದಿಲ್ಲ. ಕರ್ನಾಟಕ ಸರ್ಕಾರ ಮತ್ತು ರೈತರ ಜತೆಗೆ ಕೇಂದ್ರ ಸರ್ಕಾರವು ಹೆಗಲುಕೊಟ್ಟು ನಿಲ್ಲಲಿದೆ**
> **ಶಿವರಾಜ್ ಸಿಂಗ್ ಚೌಹಾಣ್,** ಕೇಂದ್ರ ಕೃಷಿ ಸಚಿವ

'ಕಡಿಮೆ ನೀರಿನಲ್ಲಿ ಹೆಚ್ಚು ಇಳುವರಿ ನೀಡುವ ತಳಿಗಳನ್ನು ಅಭಿವೃದ್ಧಿಪಡಿಸಬೇಕು. ಅಂತಹ ತಳಿಗಳು ಇದ್ದರೆ, ರೈತರು ಅವುಗಳನ್ನು ಸಂಸ್ಕರಿಸಿ ಜಪಸ ಮಾಡಬೇಕು. ಇದಕ್ಕಾಗಿ ಬೀಜ ಗ್ರಾಮಗಳನ್ನು ಸ್ಥಾಪಿಸಬೇಕು. ಈ ಕಾರ್ಯದಲ್ಲಿ ತೊಡಗುವ ರೈತರಿಗೆ ₹10,000 ಪ್ರೋತ್ಸಾಹಧನ ನೀಡಲಾಗುವುದು' ಎಂದು ಉತ್ಪಾದನೋತ್ತರ ಕೃಷಿ ಪರಿಕಲ್ಪನೆಯ ಮಸ್ತು ಪ್ರದರ್ಶನದಲ್ಲಿ ಚಲುವರಾಯಸ್ವಾಮಿ, ಶಿವರಾಜ್ ಸಿಂಗ್ ಚೌಹಾಣ್ ಜೇನನ್ನು ಸವಿದರು. ಕೃಷಿ ಇಲಾಖೆ ಕಾರ್ಯದರ್ಶಿ ಸೆಲ್ವಕುಮಾರ್ ಉಪಸ್ಥಿತರಿದ್ದರು –ವಜ್ರವಾಣಿ ಚಿತ್ರ



ಫೋಟಿಸಿದರು.

ಅನುಮೋದನಾ ಪತ್ರ ಹಸ್ತಾಂತರ: '2026-27ನೇ ಸಾಲಿನ ಬಜೆಟ್‌ನಲ್ಲಿ ರಾಷ್ಟ್ರೀಯ ಕೃಷಿ ಅಭಿವೃದ್ಧಿ ಯೋಜನೆಯ ಭಾಗವಾಗಿ ರಾಜ್ಯಕ್ಕೆ ₹191.67 ಕೋಟಿ ಹಂಚಿಕೆ ಮಾಡಲಾಗುತ್ತಿದೆ. ಇದರಲ್ಲಿ ಶೀಘ್ರವೇ ₹150 ಕೋಟಿಯನ್ನು ಬಿಡುಗಡೆ ಮಾಡುತ್ತೇವೆ' ಎಂದು ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು. ಅನುದಾನ ಅನುಮೋದನಾ ಪತ್ರವನ್ನು ಚಲುವರಾಯಸ್ವಾಮಿ ಅವರಿಗೆ ಹಸ್ತಾಂತರಿಸಿದರು.

ಇದಕ್ಕೂ ಮುನ್ನ ಮಾತನಾಡಿದ ರಾಜ್ಯ ಕೃಷಿ ಸಚಿವ ಚಲುವರಾಯಸ್ವಾಮಿ, 'ಕರ್ನಾಟಕ, ಕೇಂದ್ರದ ಕೃಷಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದೆ. ಕೃಷಿ ಕ್ಷೇತ್ರದಲ್ಲಿ ರಫ್ತು ಉತ್ತೇಜನ ಮತ್ತು ಮೂಲಸೌಕರ್ಯ ಅಭಿವೃದ್ಧಿಪಡಿಸುವಲ್ಲಿ ಕೇಂದ್ರ ಸರ್ಕಾರದ ನೆರವಿನ ಅಗತ್ಯವಿದೆ ಎಂದರು. ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ, ಕೆಪಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಉಪಸ್ಥಿತರಿದ್ದರು.

Bengaluru

Prajavani pg.04

SIR effect: Labour exodus hits coffee heartland during harvest season

BANSY KALAPPA @ Bengaluru

With the coffee picking season in full swing in coffee country – Kodagu, Hassan, Shivamogga and Chikkamagaluru – a deadline in Assam has triggered an unexpected crisis for planters. Hundreds of migrant workers from Assam are heading back home, to ensure their names are on the voter list.

Assam's ongoing Special Intensive Revision SIR of electoral rolls, a major verification drive by the Election Commission, has put thousands of names at risk of deletion if residents fail to appear or submit documents in time. For many seasonal labourers who have made Karnataka's coffee estates in the Malnad areas their workplace for months or even years, missing the SIR process could mean losing their voting rights, and potentially much more, in their home state.



The result is a sudden labour crunch right when cherries are ripening and need to be picked quickly to avoid crop damage or quality loss. If left on the plants, the ripe cherries will drop to the ground and new coffee plants will sprout, causing more problems for growers. Planters were divided on dependency on migrant labour, revealing tensions over reliance on this sector.

MT Cariappa, a planter and advocate based in Srimangala, South Kodagu, says Kodagu's growers are far from dependent on Assam-origin workers. "We are getting labour from Wayanad in Kerala and HD Kote region. They come in jeeps and their wages are reasonable," he said. "Especially in South Coorg, we are not depending on them, but are getting labourers from Tamil Nadu also."

He also questioned the skill level and role of many Assam migrants. "In Kodagu, about 50 per cent of Assam labourers are employed in the construction sector, not coffee estates. Assam's workers are not skilled. They don't know coffee estate work properly. We are not dependent on Assam workers. In many estates, local tribal communities have been working for decades, providing a stable core workforce," he said.

The picture looks different elsewhere. Shirish Vijayendra, planter and former president of Karnataka Planters' Association, said, "Assamese labourers leaving during the Robusta harvest is going to create a severe shortage of labour. Price of local labour will go up too, as estates will be vying for workers." Their sudden departure has already driven up wage demands from remaining workers – both local and from other regions – leaving many planters stuck between paying more or risking over-ripe or fallen cherries.

With the SIR exercise in Assam sending ripples all the way to Karnataka's coffee bowl, exposing how interconnected labour networks are, there is anxiety that a crop year will go waste. Planters are scrambling to source alternatives: expensive local labour, workers from Tamil Nadu, or simply hoping the remaining migrants return quickly once their SIR obligations are met.

Indian Express pg.06

ಬಂಡೀಪುರ: ಇಂದಿನಿಂದ ಅಂತಾರಾಷ್ಟ್ರೀಯ 'ಹುಲಿ' ಶೃಂಗಸಭೆ

ದೇಶದ ಮೊದಲ ಶೃಂಗ | 3 ದಿನ ಕಾರ್ಯಕ್ರಮ | 23 ದೇಶಗಳ ಅರಣ್ಯ ಇಲಾಖೆ ಅಧಿಕಾರಿಗಳು, ವನ್ಯಜೀವಿ ತಜ್ಞರು, ಸಂಶೋಧಕರು ಭಾಗಿ

■ ಉದಯವಾಣಿ ಸಮಾಚಾರ

ಗುಂಡ್ಲುಪೇಟೆ(ಚಾ.ನಗರ): ದೇಶದ ಮೊದಲ 'ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ (ಹುಲಿ, ಸಿಂಹ, ಚಿರತೆ, ಜಾಗ್ವಾರ್ ಸೇರಿ ದೊಡ್ಡ ಬೆಕ್ಕು ಜಾತಿಗೆ ಸೇರಿದ ಪ್ರಾಣಿಗಳು) ಆಲಯನ್ಸ್ ಶೃಂಗಸಭೆ ಶನಿವಾರ ಬಂಡೀಪುರ ಹುಲಿ ಸಂರಕ್ಷಿತ ಅರಣ್ಯದಲ್ಲಿ ಫೆ.9ರಿಂದ 11ರವರೆಗೆ ನಡೆಯಲಿದ್ದು, ಇದಕ್ಕಾಗಿ ಅಧಿಕಾರಿಗಳು ಸಕಲ ಸಿದ್ಧತೆ ಕೈಗೊಂಡಿದ್ದಾರೆ.

ಭಾರತ ಸರ್ಕಾರದ ತಾಂತ್ರಿಕ ಮತ್ತು ಆರ್ಥಿಕ ಸಹಕಾರ ಯೋಜನೆಯಡಿ ವನ್ಯಜೀವಿ ಸಂರಕ್ಷಣೆ ಮತ್ತು ನಿರ್ವಹಣೆ ಕುರಿತು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮೇಲುಕಾಮನಹಳ್ಳಿಯಲ್ಲಿ ಕಾರ್ಯಾಗಾರ ಹಮ್ಮಿಕೊಂಡಿದ್ದು ಸೋಮವಾರ ಮಧ್ಯಾಹ್ನ 3 ಗಂಟೆಗೆ ಚಾಲನೆ ಸಿಗಲಿದೆ.

ದೇಶದ ಹುಲಿ ಸಂತತಿ ವಿಷಯದಲ್ಲಿ ಕರ್ನಾಟಕ 2ನೇ ರಾಜ್ಯವಾಗಿ ಹೊರ ಹೊಮ್ಮಲು ಬಂಡೀಪುರ ಹುಲಿ ಸಂರಕ್ಷಿತ ಅಭಯಾರಣ್ಯದಲ್ಲಿ ಹೆಚ್ಚು ಹುಲಿಗಳಿರುವುದು ಪ್ರಮುಖ ಕಾರಣವಾಗಿದೆ. ಜತೆಗೆ ಹುಲಿ ಯೋಜನೆ ಪ್ರಾರಂಭವಾಗಿ 50 ವರ್ಷವಾಗಿರುವ ಹಿನ್ನೆಲೆಯಲ್ಲಿ ಫೆ.9ರಿಂದ 3 ದಿನಗಳ ಕಾಲ ಬಂಡೀಪುರದಲ್ಲಿ 'ಅಂತಾರಾಷ್ಟ್ರೀಯ ಬಿಗ್ ಕ್ಯಾಟ್ ಆಲಯನ್ಸ್ ಶೃಂಗಸಭೆ ಆಯೋಜಿಸಿದ್ದು ಸದರಿ ಕಾರ್ಯಾಗಾರಕ್ಕೆ 23 ದೇಶಗಳ ಅರಣ್ಯ ಇಲಾಖೆಯ ಅರಣ್ಯ ಇಲಾಖೆ ಮೇಲಾಧಿಕಾರಿಗಳು ಕಾರ್ಯಾಗಾರಕ್ಕೆ ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಬಂಡೀಪುರದಲ್ಲಿ ಭಾಗವಹಿಸಲಿದ್ದಾರೆ.

ಬಂಡೀಪುರದಲ್ಲಿ ಸಿದ್ಧತೆ: ಕೇಂದ್ರ ಮತ್ತು ರಾಜ್ಯ ಅರಣ್ಯ ಇಲಾಖೆ ಮೇಲಾಧಿಕಾರಿಗಳು ಕಾರ್ಯಾಗಾರಕ್ಕೆ ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಪ್ರಭಾಕರನ್ ನೇತೃತ್ವದಲ್ಲಿ ಬಂಡೀಪುರ ಕೇಂದ್ರ ಸ್ಥಾನವಾದ ಮೇಲುಕಾಮನಹಳ್ಳಿ ಕ್ಯಾಂಪ್‌ನಲ್ಲಿರುವ ಸಭಾ ಭವನದಲ್ಲಿ ಶೃಂಗ ಸಭೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಬಂಡೀಪುರ ಅರಣ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. 1973ರ ಏ.9 ರಂದು ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರಿಂದ ಉದ್ಘಾಟನೆಗೊಂಡ ಬಂಡೀಪುರ ಹುಲಿ ಯೋಜನೆ ಹುಲಿ ಸಂತತಿ ಸಂರಕ್ಷಣೆ ವಿಷಯದಲ್ಲಿ ಉತ್ತಮ ಪ್ರಗತಿ ಸಾಧಿಸಿದೆ. ಇದೇ ಕಾರಣಕ್ಕೆ ಹುಲಿ ಯೋಜನೆ ಸ್ಥಾರಂಭವಾಗಿ 50 ವರ್ಷ ತುಂಬಿದ 2023ನೇ ಇಸವಿಯಲ್ಲಿ ಬಂಡೀಪುರಕ್ಕೆ ಪ್ರಧಾನಿ ಮೋದಿ ಭೇಟಿ ನೀಡಿದ್ದರು. ಆಲ್ಲಸಫಾರಿ ನಡೆಸುವ ಮೂಲಕ ಹುಲಿ ಯೋಜನೆ ಮಹತ್ವ ಸಾರಿದ್ದರು. ಅದೇ ದಿನ ಮೈಸೂರಲ್ಲಿ 'ಅಂತಾರಾಷ್ಟ್ರೀಯ ದೊಡ್ಡ ಬೆಕ್ಕು ಮೈತ್ರಿ' ಏರ್ಪಡಿಸಿದ್ದರು.

ಮಹತ್ವದ ನಿರ್ಣಯ ಸಾಧ್ಯತೆ

ಬಿಗ್ ಕ್ಯಾಟ್ ಜಾತಿಗೆ ಸೇರಿದ ಪ್ರಾಣಿಗಳ ಸಂರಕ್ಷಣೆ ವಿಷಯದಲ್ಲಿ ಆಯೋಜಿಸಿರುವ ಶೃಂಗಸಭೆ ದೇಶದ ಮೊದಲ ಶೃಂಗಸಭೆಯಾಗಿರುವ ಹಿನ್ನೆಲೆಯಲ್ಲಿ ಮಹತ್ವ ಪಡೆದುಕೊಂಡಿದೆ. ವಿಶ್ವದ ವನ್ಯಪ್ರಾಣಿಗಳ ಆಳವು-ಉಳಿವಿನ ವಿಷಯ ಬಂದಾಗ ಹುಲಿ ಸಂರಕ್ಷಣೆಗೆ ಮಹತ್ವ ನೀಡಬೇಕಾಗುತ್ತದೆ. ಈ ಶೃಂಗದಲ್ಲಿ ಪಾಲ್ಗೊಳ್ಳುವ ಎಲ್ಲ ದೇಶಗಳು ಮಹತ್ವದ ನಿರ್ಣಯ ಕೈಗೊಳ್ಳುವ ಸಾಧ್ಯತೆ ಇದೆ.



ವನ್ಯಪ್ರಾಣಿಗಳ ಸಂರಕ್ಷಣೆ

ಬಂಡೀಪುರದಲ್ಲಿ ಹುಲಿ ಸಂತತಿ ಹೆಚ್ಚಿರುವಂತೆ ಆಯಾ ದೇಶಗಳಲ್ಲಿ ಸಿಂಹ, ಚಿರತೆ ಇನ್ನೂ ಹಲವು ವನ್ಯಪ್ರಾಣಿಗಳ ಸಂರಕ್ಷಣೆ ನಡೆದುಕೊಂಡು ಬಂದಿರುತ್ತದೆ. ಆದರಂತೆ ಹುಲಿ ಸಂರಕ್ಷಣೆ ವಿಷಯದಲ್ಲಿ ಬಂಡೀಪುರ ವ್ಯಾಪ್ತಿಯಲ್ಲಿ ಆಗಿರುವ ಪ್ರಗತಿಯ ಬಗ್ಗೆ ಶೃಂಗದಲ್ಲಿ ಭಾರತ ಸೇರಿ 23 ದೇಶಗಳ ಅರಣ್ಯ ಇಲಾಖೆಯ ಅಧಿಕಾರಿಗಳು, ವನ್ಯಜೀವಿ ತಜ್ಞರು, ಸಂಶೋಧಕರು ಶೃಂಗದಲ್ಲಿ ಅಭಿಪ್ರಾಯ ಹಂಚಿಕೊಳ್ಳುತ್ತಾರೆ.

Udayavani pg.08

ರಾಜ್ಯದಲ್ಲಿ 25 ಬೀಜ ಗ್ರಾಮ ಅಭಿವೃದ್ಧಿ: ಚೌಹಾಣ್

ಬೀಜ ಉತ್ಪಾದನೆಯಲ್ಲಿ ತೊಡಗಿದ ರೈತರಿಗೆ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ. ಪ್ರೋತ್ಸಾಹಧನ | ತೊಗರಿ ಬೆಳೆ ಪ್ರದೇಶಕ್ಕೆ ವಿಶೇಷ ಪ್ರೋತ್ಸಾಹ

ರಾಜ್ಯದಲ್ಲಿ 35 ಬೇಳೆ ಮಿಲ್ ಸ್ಥಾಪನೆ, ಪ್ರತಿ ಘಟಕಕ್ಕೆ 25 ಲಕ್ಷ ರೂ. ಹಣ | ತೊಗರಿ ಉತ್ಪಾದನೆ ದ್ವಿಗುಣಕ್ಕೆ ಕ್ರಮ: ಕೇಂದ್ರ ಕೃಷಿ ಸಚಿವರ ಘೋಷಣೆ

■ ಉದಯವಾಣಿ ಸಮಾಚಾರ

ಬೆಂಗಳೂರು: ಕೃಷಿ ಇಳುವರಿ ಹೆಚ್ಚಳಕ್ಕೆ ಸಹಕಾರಿ ಆಗುವಂತೆ ರೈತರಿಗೆ ಗುಣಮಟ್ಟದ ಬಕ್ತನೆ ಬೀಜ ಒದಗಿಸಲು ರಾಜ್ಯದಲ್ಲಿ 25 ಬೀಜ ಗ್ರಾಮ ಆರಂಭಿಸಿ ಅಭಿವೃದ್ಧಿಪಡಿಸಲಾಗುವುದು. ಈ ಮೂಲಕ ಸ್ಥಳೀಯ ರೈತರೇ ಬಕ್ತನೆ ಬೀಜಗಳನ್ನು ಉತ್ಪಾದಿಸುವಂತೆ ಪ್ರೋತ್ಸಾಹಿಸಲಾಗುವುದು ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು.

ಕೃಷಿ ಇಲಾಖೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಏರ್ಪಡಿಸಿದ್ದ 3 ದಿನಗಳ ಅಂತಾರಾಷ್ಟ್ರೀಯ ವಾಣಿಜ್ಯ ಮೇಳದ ಸಮಾರೋಪ ಸಮಾರಂಭದಲ್ಲಿ ಭಾನುವಾರ ಮಾತನಾಡಿ, ಕೃಷಿ ಉತ್ಪಾದನೆ ಇಳುವರಿ ಗುಣಮಟ್ಟದ ಬಕ್ತನೆ ಬೀಜಗಳ ಅವಶ್ಯಕತೆ. ಹಾಗಾಗಿ ಸ್ಥಳೀಯವಾಗಿ ಬೀಜೋತ್ಪಾದನೆ, ಸಂಸ್ಕರಣೆ ಮತ್ತು ವಿತರಣೆಗೆ ಅನುಕೂಲವಾಗುವಂತೆ ರಾಜ್ಯದ 25 ಗ್ರಾಮಗಳನ್ನು ಬೀಜ ಗ್ರಾಮಗಳಾಗಿ ಅಭಿವೃದ್ಧಿಪಡಿಸಲಾಗುವುದು. ಈ ಮೂಲಕ ಬೀಜ ಉತ್ಪಾದನೆಯಲ್ಲಿ ತೊಡಗಿದ ರೈತರಿಗೆ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂಪಾಯಿ ಪ್ರೋತ್ಸಾಹಧನ ನೀಡಲಾಗುವುದು. ವಿಶೇಷವಾಗಿ ತೊಗರಿ ಬೆಳೆಯುವ ಪ್ರದೇಶಗಳಲ್ಲಿ ಈ ಗ್ರಾಮಗಳ ಅಭಿವೃದ್ಧಿಗೆ ಕೇಂದ್ರದಿಂದ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದರು.

ರಾಜ್ಯದಲ್ಲಿ ಕೃಷಿ ಬಲಪಡಿಸಿ ರೈತರ ಆದಾಯ ದ್ವಿಗುಣಗೊಳಿಸಲು ಮತ್ತು ಸಂಸ್ಕರಣೆ, ಮೌಲ್ಯವರ್ಧನೆ ಚಟುವಟಿಕೆ ವಿಸ್ತರಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಕರ್ನಾಟಕವು ಗುಣಮಟ್ಟದ ತೊಗರಿ ಉತ್ಪಾದನೆಯಲ್ಲಿ ಅಗ್ರ ಸ್ಥಾನದಲ್ಲಿದೆ. ಆದರೆ, ಪ್ರತಿ ಹೆಕ್ಟೇರ್ ಉತ್ಪಾದನೆ ಪ್ರಮಾಣ ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇದೆ. ಅದನ್ನು ದ್ವಿಗುಣಗೊಳಿಸುವ ಅಗತ್ಯವಿದ್ದು ಈ ನಿಟ್ಟಿನಲ್ಲಿ ಆತ್ಮನಿರ್ಭರ ಪಲ್ಸ್ ಮಿಷನ್ ಯೋಜನೆಯಡಿ ಬೇಳೆಕಾಳು ಉತ್ಪಾದನೆ ಹೆಚ್ಚಿಸಲು ಕೇಂದ್ರದಿಂದ ವೈಜ್ಞಾನಿಕ ಮತ್ತು ತಾಂತ್ರಿಕ ಬೆಂಬಲ ನೀಡಲಾಗುವುದು. ಉತ್ಪಾದನೆಯೊಂದಿಗೆ ಸಂಸ್ಕರಣೆಯೂ ಆಗಬೇಕಿದೆ. ಹಾಗಾಗಿ ರಾಜ್ಯದಲ್ಲಿ 35 ಬೇಳೆ ಮಿಲ್‌ಗಳ ಸ್ಥಾಪನೆಯಾಗುವುದು. ಈ ಮೂಲಕ ಪ್ರತಿ ಘಟಕಕ್ಕೂ ಕೇಂದ್ರದಿಂದ 25 ಲಕ್ಷ ರೂ. ಅನುದಾನ ಒದಗಿಸಲಾಗುವುದು. ರೈತ ಉತ್ಪಾದಕ ಸಂಘಗಳು, ರೈತ ಗುಂಪುಗಳು ಮತ್ತು ಖಾಸಗಿ ವಲಯಗಳು ಈ ಘಟಕಗಳನ್ನು ಸ್ಥಾಪಿಸುವಂತೆ ಉತ್ತೇಜಿಸಲಾಗುವುದು ಎಂದು ಹೇಳಿದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕರ್ನಾಟಕದ ಅಭಿವೃದ್ಧಿ ಮತ್ತು ರೈತರ ಬಗ್ಗೆ ಕಾಳಜಿ ಹೊಂದಿದ್ದು ಯಾವುದೇ ತಾರತಮ್ಯವಿಲ್ಲದೇ ರಾಜ್ಯ ಸರ್ಕಾರದೊಂದಿಗೆ ಕೆಲಸ ಮಾಡಲಿದೆ ಎಂದು ಭರವಸೆ ನೀಡಿದರು.



ಮೇಳದಲ್ಲಿ ತೆಂಗಿನ ನಾರಿನ ಉತ್ಪನ್ನಗಳನ್ನು ಸಚಿವ ಶಿವರಾಜ್ ಸಿಂಗ್ ಚೌಹಾಣ್ ವೀಕ್ಷಿಸಿದರು.

ತೆಂಗು ರೋಗ ನಿಯಂತ್ರಣಕ್ಕೆ ವೈಜ್ಞಾನಿಕ ತಂಡ

ರಾಜ್ಯದಲ್ಲಿ ತೆಂಗು ಬೆಳೆ ಹಲವು ರೋಗಗಳಿಗೆ ತುತ್ತಾಗಿ ಇಳುವರಿ ಕುಂಠಿತವಾಗಿದೆ. ಹಾಗಾಗಿ ಹಳೆಯ ತೋಟಗಳನ್ನು ಬದಲಿಸಿ ಅಧಿಕ ಇಳುವರಿ ನೀಡುವ ಹೊಸ ತಳಿಗಳನ್ನು ನೆಡುವ ಮೂಲಕ ತೆಂಗು ಅಭಿವೃದ್ಧಿಗೊಳಿಸುವ ಯೋಜನೆಯನ್ನು ಕೇಂದ್ರವು ರೂಪಿಸಿದೆ. ತೆಂಗು ಬೆಳೆ ರೋಗ ನಿಯಂತ್ರಣಕ್ಕಾಗಿ ವೈಜ್ಞಾನಿಕ ತಂಡ ರಚಿಸಲಾಗುವುದು. ಯೋಜನೆಯ ಪ್ರಯೋಜನ ಪಡೆಯಲು ರಾಜ್ಯವು ಪ್ರಸ್ತಾಪವನ್ನು ಕೇಂದ್ರಕ್ಕೆ ಸಲ್ಲಿಸಿದ್ದಲ್ಲಿ ನೆರವು ಒದಗಿಸಲಾಗುವುದು ಎಂದು ಚೌಹಾಣ್ ಹೇಳಿದರು.

ಸಿರಿಧಾನ್ಯ ಕೃಷಿ, ಪ್ರಚಾರದಲ್ಲಿ ಕರ್ನಾಟಕ ಮಾದರಿ: ಶಿವರಾಜ್ ಸಿಂಗ್ ಚೌಹಾಣ್

ಸಿರಿಧಾನ್ಯಗಳನ್ನು ಬೆಳೆಯುವಲ್ಲಿ ಮತ್ತು ಪ್ರಚಾರದಲ್ಲಿ ಕರ್ನಾಟಕ ಮಾದರಿಯಾಗಿದ್ದು ವಿಶ್ವ ಮಟ್ಟವನ್ನು ವ್ಯಾಪಿಸಿದೆ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು. ಸದ್ಯ ಸಿರಿಧಾನ್ಯ ಬೆಳೆಗಾರರಿಗೆ ನೀಡುತ್ತಿರುವ ಬೆಂಬಲದೊಂದಿಗೆ ಹೆಚ್ಚುವರಿ ಯೋಜನೆ ಜಾರಿಗೆ ತರಲಾಗುವುದು. ಕರ್ನಾಟಕ ಕೃಷಿ ವೈವಿಧ್ಯತೆ ಹೊಂದಿದ್ದು ಕಾಫಿ, ತೆಂಗು, ಶ್ರೀಗಂಧ, ರೇಷ್ಮೆ, ಡ್ರಾಗನ್ ಫ್ರೂಟ್ ಜತೆಗೆ ಸಿರಿಧಾನ್ಯಗಳ ಉತ್ಪಾದನೆ ಮೂಲಕ ವಿಶ್ವಕ್ಕೆ ಪೌಷ್ಟಿಕತೆ ಮತ್ತು ಆರೋಗ್ಯವನ್ನು ಪ್ರಚಾರಪಡಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕೇಂದ್ರ ಸರ್ಕಾರ ಗೋದಂಬಿ, ಕಾಫಿ ಮತ್ತು ಕೋಕೋ ಬೆಳೆಗಳಿಗೆ ಉತ್ತೇಜನ ನೀಡಲು ಹೊಸ ಯೋಜನೆ ರೂಪಿಸುತ್ತಿದೆ ಎಂದರು.

ರಾಜ್ಯಕ್ಕೆ ₹197.67 ಕೋಟಿ ಅನುದಾನ

ಆತ್ಮನಿರ್ಭರ ಪಲ್ಸ್ ಮಿಷನ್ ಯೋಜನೆಯಡಿ ಕೇಂದ್ರ ಬಜೆಟ್ ಘೋಷಣೆಯಂತೆ ಕರ್ನಾಟಕಕ್ಕೆ 191.67 ಕೋಟಿ ರೂ. ಅನುದಾನ ಬಿಡುಗಡೆಗೊಳಿಸಿರುವ ಅನುಮೋದನಾ ಪತ್ರವನ್ನು ಕೇಂದ್ರ ಸಚಿವರು ರಾಜ್ಯದ ಕೃಷಿ ಸಚಿವ ಚಲುವರಾಯಸ್ವಾಮಿಗೆ ಕೇಂದ್ರ ಸಚಿವರು ಹಸ್ತಾಂತರಿಸಿದರು. ರಾಷ್ಟ್ರೀಯ ಕೃಷಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಬಾಕಿ ಇರುವ 154 ಕೋಟಿ ರೂ. ಅನುದಾನವನ್ನು ಶೀಘ್ರ ಬಿಡುಗಡೆಗೊಳಿಸಲಾಗುವುದು. ರೈತರ ಕಲ್ಯಾಣ, ಶಾಶ್ವತ ಕೃಷಿ ಬೆಳವಣಿಗೆ ಮತ್ತು ಕೇಂದ್ರ-ರಾಜ್ಯಗಳ ಸ್ಪಷ್ಟಿತ ಸಹಕಾರಕ್ಕೆ ಕೇಂದ್ರ ಬದ್ಧ ಎಂದರು.

Udayavani pg.06